ಜನಪದ ಜಾಗರ

ಬೆಲೆ : ರೂ ೧೦-೦೦


ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೫ ಆಗಸ್ಟ್ - ೨೦೧೪ ಸಂಚಿಕೆ - ೦೧

ಕೇಂದ್ರ ಬಜೆಟ್ : ಗ್ರಾಮ ಭಾರತದ ದೃಷ್ಟಿಯಲಿ



ಜನಪದ ವಿಚಾರದಲ್ಲಿ

ಆಗಸ್ಟ್ – 2014

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಆಗಸ್ಟ್ – ೨೦೧೪
ಸಂಪುಟ – ೧೫
ಸಂಚಿಕೆ – ೦೧

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/–
ಬಿಡಿ ಸಂಚಿಕೆ : ರೂ ೧೦/–

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ – 571431
ಮಂಡ್ಯ ಜಿಲ್ಲೆ

ಫೋನ್ : 08236 – 316344
08236 – 299854
email :
janapada@yahoo.com
Web: janapada.net

ಸ್ವಾಭಿಮಾನಿ

ರಾಟೆ ತಿರುವುತ ಭರಾಟೆಯಿಂದ ಚಕ್ರವ
ಸುತ್ತುತ್ತಿರುವ ನೀನು ಕಷ್ಟ ಜೀವಿ
ರಾಜ್ಯಗಳು ಬಂದು ಹೋದರೂ ರಾಜ
ಕಾಯಕದಲ್ಲಿ ಮಗ್ನ

ದಾರಗಳ ಬೇಕಾದಂತೆ ಹೊಸೆದು ಹಂತ
ಹಂತವಾಗಿ ಸುತ್ತುತ್ತ
ಕಂತೆಯಾಗಿ ಸರಕು ಕೊಡುವೆ ತುತ್ತಿನ
ಚೀಲ ತುಂಬುವೆ

ಮನೆಯಲ್ಲೇ ಮನದುಂಬಿ, ಹುರಿದುಂಬಿ
ಗತ್ತಿನಿಂದಲೇ ಬದುಕನು ಸಾಗಿಸಿರುವೆ
ಗಾಂಧಿ ಮಾರ್ಗದಲ್ಲಿ ನೀನು ನಡೆದು
ಧನ್ಯಳಾಗಿರುವೆ


ಸ್ವಾಭಿಮಾನಿ ನೀನು ಸಿಜದ ಸಾರ್ಥಕ
ಬದುಕು ನಿನ್ನದು
ಮನೆಯ ಹೊರಗೆ ದೈನಿಕದ ಕಾಯಕ ಈ
ಬದುಕು ಎಲ್ಲರಿಗೂ ಪ್ರೇರಕ

–ಭಾಗ್ಯಲಕ್ಷ್ಮಿ ಮಗ್ಗೆ

('ಮಯೂರ' ಸಭಾರ)


ಚಿಂತನೆಗೊಂದು ಸಂಗತಿ

ದೇಶದ ಹೊಸ ನಾಯಕ ನರೇಂದ್ರ ಮೋದಿ ಗುಜರಾತ್‌ನಲ್ಲಿ ಸರ್ದಾರ್ ಸರೋವರ ಡ್ಯಾಮ್ ಬಳಿ 182 ಮೀಟರ್ ಎತ್ತರದ ಸರ್ದಾರ ವಲ್ಲಭಭಾಯಿ ಪಟೇಲರ ವಿಗ್ರಹವನ್ನು ನಿರ್ಮಿಸುವ ಯೋಜನೆ ಹಾಕಿಕೊಂಡಿದ್ದಾರೆ. ಜಗತ್ತಿನಲ್ಲಿಯೇ ಅತ್ಯಂತ ಎತ್ತರದ ವಿಗ್ರಹ ಇದಾಗಲಿದೆ. ಈ ವಿಗ್ರಹದ ನಿರ್ಮಾಣಕ್ಕೆ ಅಂದಾಜು 2,063 ಕೋಟಿ ಖರ್ಚಾಗುವ ನಿರೀಕ್ಷೆಯಿದೆ. ಸರ್ದಾರ್ ವಲ್ಲಭಭಾಯಿ ಪಟೇಲ್ ಭಾರತ ದೇಶದ ದೊಡ್ಡ ನಾಯಕರಾಗಿದ್ದರೆಂಬುವುದರಲ್ಲಿ ಸಂಶಯವಿಲ್ಲ. ಸ್ವಾತಂತ್ರ್ಯ ಆಂದೋಲನದಲ್ಲಿ ಮಹಾತ್ಮಾ ಗಾಂಧೀಜಿಯವರ ನಿಕಟ ಸಹವರ್ತಿಯಾಗಿ ಹೋರಾಟ ಮಾಡಿದ್ದನ್ನು ಮರೆಯುವಂತಿಲ್ಲ. ಸತ್ಯಾಗ್ರಹದಲ್ಲಿ ಅಡಕವಾಗಿರುವ ಪ್ರಬಲ ಶಕ್ತಿಯನ್ನು ತೋರಿಸಿಕೊಟ್ಟ ಧೀರ ಸತ್ಯಾಗ್ರಹಿ ಅವರಾಗಿದ್ದರು. ಸ್ವಾತಂತ್ರ್ಯಾ ನಂತರ ದೇಶದಲ್ಲಿದ್ದ ಸುಮಾರು ಆರುನೂರು ದೇಶೀಯ ಸಂಸ್ಥಾನಗಳನ್ನು ರಾಜತಾಂತ್ರಿಕ ಕುಶಲತೆಯಿಂದ ದೇಶದೊಳಗೆ ಒಗ್ಗೂಡಿಸಿದ ಶ್ರೇಷ್ಠ ಗೃಹ ಮಂತ್ರಿ ಆಗಿದ್ದರು ಉಕ್ಕಿನ ಮನುಷ್ಯನೆಂದೇ ಖ್ಯಾತರಾಗಿದ್ದರು. ಇಂಥ ನಾಯಕನೊಬ್ಬನ ಪ್ರತಿಮೆಯನ್ನು ಸ್ಥಾಪಿಸುವುದು ತಪ್ಪೇನಲ್ಲ. ಆದರೆ ಕಳೆದ ಅರವತ್ತೇಳು ವರ್ಷಗಳಲ್ಲಿ ದೇಶದಲ್ಲಿ ಆಗಿರುವ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಬದಲಾವಣೆಗಳ ಹಿನ್ನೆಲೆಯಲ್ಲಿ ಮತ್ತು ರೂಪಗೊಳ್ಳುತ್ತಿರುವ ಹೊಸ ಮೌಲ್ಯಗಳ ಬೆಳಕಿನಲ್ಲಿ ಮತ್ತು ದೇಶದ ಮುಂದಿರುವ ಅನೇಕ ಬಗೆಯ ಸಮಸ್ಯೆಗಳ ಎದುರಿನಲ್ಲಿ ಬೃಹತ್ ಮೊತ್ತದ ಇಲ್ಲವೇ ಚಿಕ್ಕ ಮೊತ್ತದ ಬಜೆಟ್ಟಿನಲ್ಲಿ, ವಿಗ್ರಹಗಳನ್ನು ಸ್ಥಾಪಿಸುವುದು ಎಷ್ಟು ಉಚಿತವೆಂಬುದನ್ನು ದೇಶದ ಎಲ್ಲ ನಾಯಕರು ಚಿಂತನೆಮಾಡಬೇಕಾದ ಸಂಗತಿಯಾಗಿದೆ. ಮಾನವ ಶಕ್ತಿಯಿಂದ ನಿರ್ಮಿತವಾಗುವ ಇಂಥ ಬೃಹತ್ 'ಸರ್ಕಸ್ಸಿ'ನ ಹಿಂದೆ ಇರುವ ಉದ್ದೇಶಗಳನ್ನು ಗಮನಿಸಿದರೆ ಇದ್ದಿರಬಹುದಾದ ಉನ್ನತ ಆದರ್ಶಗಳು ಒಣಗಿ ಕರಕಲಾಗುತ್ತವೆ. ಪ್ರವಾಸೋದ್ಯಮದ ಕೇಂದ್ರ ಬಿಂದುವಾಗಿ ಆ ಸ್ಮಾರಕಗಳು ಹಣ ಮಾಡುವ ಕುಟಿಲ ಪ್ರಯತ್ನವಾಗಿ ಪರಿಣಮಿಸುತ್ತವೆ. ಪ್ರವಾಸೋದ್ಯಮದಿಂದ ಲಾಭಕ್ಕಿಂತ ಹಾನಿ ಹೆಚ್ಚೆಂಬುದು ಪರಿಸರ ತಜ್ಞರ ಏಕಾಭಿಪ್ರಾಯವಾಗಿದೆ. ಪ್ರವಾಸೋದ್ಯಮದಿಂದ ಸ್ಥಳೀಯ ಸಂಸ್ಕೃತಿ ಕೂಡ ಹಾಳಾಗುತ್ತದೆ. ಇಂಥ ವಿಚಾರಗಳ ಹಿನ್ನೆಲೆಯಲ್ಲಿ ಮುಖಂಡರ ವಿಗ್ರಹಗಳ ಸ್ಥಾಪನೆ ಮತ್ತು ಆರಾಧನೆ ಸೂಕ್ತವೇ ಎಂದು ಆಲೋಚಿಸುವ ಕಾಲವು ಬಂದಿದೆ.



ಕೇಂದ್ರ ಬಜೆಟ್ : ಗ್ರಾಮ ಭಾರತದ ದೃಷ್ಟಿಯಲ್ಲಿ

– ಸುರೇಂದ್ರ ಕೌಲಗಿ



2014–2015 ನೇ ಸಾಲಿನ ಕೇಂದ್ರ ಬಜೆಟ್ಟಿನಲ್ಲಿ ಗ್ರಾಮ ಮತ್ತು ಗಾಂಧೀ ಪೂರ್ಣವಾಗಿ ಹಿನ್ನೆಲೆಗೆ ಸೇರಿದಂತನಿಸುತ್ತದೆ. ಆಗಿರುವ ಔದ್ಯೋಗೀಕರಣ ಮತ್ತು ನಗರೀಕರಣಗಳ ನಂತರವೂ ಗ್ರಾಮೀಣ ಭಾರತವೆಂಬುದೊಂದಿದೆ. ನರಸಿಂಹರಾವ್ ಪ್ರಧಾನ ಮಂತ್ರಿಯಾಗಿದ್ದಾಗ ಪ್ರಾರಂಭಿಸಿದ್ದ ಹೊಸ ಆರ್ಥಿಕ ನೀತಿಯ ಕಾರಣದಿಂದಾಗಿ ದೇಶ ನಗರ ಭಾರತ ಮತ್ತು ಗ್ರಾಮಭಾರತವೆಂಬ ಭೇದ ಉಂಟಾಯಿತು. ಸ್ವಾತಂತ್ರ್ಯ ಬರುವವರೆಗೆ ಭಾರತ ಗ್ರಾಮೀಣ ಭಾರತವೇ ಆಗಿತು. ಮಹಾತ್ಮ ಗಾಂಧೀ ಗ್ರಾಮೀಣ ಭಾರತದ ಉನ್ನತಿಯೇ ಇಡೀ ಭಾರತದ ಉನ್ನತಿಯೆಂದು ಹೇಳಿದ್ದರು. ಔದ್ಯೋಗೀಕರಣ ಹಾಗೂ ಶೈಕ್ಷಣಿಕ ಪ್ರಸಾರದ ನಂತರವೂ ದೇಶದ ಜನಸಂಖ್ಯೆಯಲ್ಲಿ ನೂರಕ್ಕೆ ಎಪ್ಪತ್ತರಷ್ಟು ಜನ ಹಳ್ಳಿಗಳಲ್ಲಿದ್ದಾರೆ. ಕೈಗಾರಿಕೆಗೆ ಬೇಕಾಗುವ ಕಚ್ಚಾ ಪದಾರ್ಥಗಳನ್ನು ಹಳ್ಳಿಗಳಲ್ಲಿ ವಾಸಿಸುತ್ತಿರುವ ಅರವತ್ತು ಕೋಟಿ ರೈತರು ಉತ್ಪಾದಿಸಿ ಕೊಡುತ್ತಿದ್ದಾರೆ. ಜೊತೆಗೆ ದೇಶಕ್ಕೆ ಅಗತ್ಯವಾದ ಮಾನವ ಸಂಪನ್ಮೂಲಗಳನ್ನು ಗ್ರಾಮಗಳೇ ಒದಗಿಸುತ್ತಿವೆ. ಇಂದು ಕೂಡ ಹಳ್ಳಿಗಳು "ದೇಶದ ಬೆನ್ನೆಲಬು" ಎಂಬ ಮಾತು ಸುಳ್ಳಾಗಿಲ್ಲ. ಪರಿಸ್ಥಿತಿ ಹೀಗಿರುವಾಗ ಕೇಂದ್ರ ಬಜಟ್ ಗ್ರಾಮಗಳನ್ನು ಪೂರ್ಣವಾಗಿ ಉಪೇಕ್ಷಿಸಿರುವುದು ತರವಲ್ಲ; ದೇಶದ ಅಭಿವೃದ್ಧಿ ಮಾಡುವ ಕ್ರಮವಲ್ಲ. ದೇಶದ ಗ್ರಾಮಗಳನ್ನು ಇಪ್ಪತ್ತೊಂದನೇ ಶತಮಾನಕ್ಕನುಗುಣವಾಗಿ ವ್ಯವಸಾಯವನ್ನೇ ಪ್ರಧಾನವಾಗಿಟ್ಟುಕೊಂಡು ಗಾಂಧೀಜಿ ಕಂಡಿದ್ದ 'ಕನಸಿನ ಭಾರತ' ಹಳ್ಳಿಗಳನ್ನಾಗಿ ಹೇಗೆ ಮಾರ್ಪಡಿಸಿಕೊಳ್ಳಬಹುದಾಗಿತ್ತು ಎಂಬ ಬಗ್ಗೆ ಹಣಕಾಸಿನ ಮಂತ್ರಿಗಳು ಯಾವ ಕ್ರಮವನ್ನು ಕೈಗೊಳ್ಳದೆ ಇರುವುದು ವಿಷಾದನೀಯ. ಗ್ರಾಮಸ್ವರಾಜ್ಯ ಸಿದ್ಧಂತ ಮೇರೆಗೆ ಸರ್ವಾಂಗ ಸುಂದರ ಗ್ರಾಮಗಳನ್ನು ನಿರ್ಮಿಸುವು ಬದಲು ನೂರ ಹೊಸ ಸುಸರ್ಜಿತ ನಗರಗಳನ್ನು (ಸ್ಮಾರ್ಟ್ ಸಿಟಿಗಳನ್ನು) ನಿರ್ಮಿಸಲು ಹೊರಟಿರುವುದು ಒಳ್ಳೆಯ ದಿನ ಬರುವ ಮುನ್ಸೂಚನೆಯಂತು ಅಲ್ಲ. ಈಗಾಗಲೇ ಬೆಳೆದಿರುವ ಮಹಾನಗರಗಳು ಸೈತಾನನ ಕಾರ್ಖಾನೆಗಳಾಗಿವೆ. ನೂರು ಸ್ಮಾರ್ಟ್ ಸಿಟಿಗಳನ್ನು

ನಿರ್ಮಾಣ ಮಾಡುವ ಬದಲು ದೇಶದಲ್ಲಿರುವ ಐದುನೂರು ಜಿಲ್ಲೆಗಳಲ್ಲಿ ಜಿಲ್ಲೆಗೆ ಹತ್ತರಂತೆಯಾದರೂ ಸರ್ವಾಂಗ ಸುಂದರ ಗ್ರಾಮಗಳನ್ನು ನಿರ್ಮಿಸಿದ್ದರೆ ಇಂದಿನ ನಗರೀಗಕರಣಕ್ಕೆ ಪರ್ಯಾಯವಾಗಿ ಇನ್ನೊಂದು ವ್ಯವಸ್ಥೆಗನ್ನು ಕಲ್ಪಿಸಬಹುದಾಗಿತ್ತು, ಇಂಥ ಯೋಚನೆ ಮಾಡದೆ ಕೇವಲ ನಗರಗಳ ಅಭಿವೃದ್ಧಿ ಮತ್ತು ಅಲ್ಲಿಯ ಜನರ ಅಭಿವೃದ್ಧಿಗೆ ಬಜೆಟಲ್ಲಿ ಮಹತ್ವ ಕೊಟ್ಟಿರುವುದು ಸರಿಯಲ್ಲ. ಬಜೆಟಲ್ಲಿ ಗ್ರಾಮಗಳ ಉದ್ಧಾರದ ಚಿಂತನೆ ಮಾಡದೆ ರೈತರಿಗೆ 8 ಲಕ್ಷ ಕೋಟಿ ಹಣಸಾಲ ಕೊಡುವುದರ ಮೂಲಕ ರೈತರನ್ನು ಸಂಕಷ್ಟಕ್ಕೆ ಸಿಲುಕಿಸುವ ಪ್ರಯತ್ನ ಮಾಡಿರುವುದು ದುಃಖದ ಸಂಗತಿ.

ಕೃಷಿ ಮಾಡುವವರ ಸಂಖ್ಯೆ ಗಣನೀಯವಾಗಿ ಕುಸಿಯುತ್ತಿರುವಾಗು ರೈತರ ಆತ್ಮಹತ್ಯೆಯನ್ನು ತಡೆಯುವ ಬಗ್ಗೆ ನಿಜವಾದ ಕಳಕಳಿ ಬಜೆಟ್ಟಿನಲ್ಲಿ ಬಿಂಬಿತವಾಗಿಲ್ಲ. ವ್ಯವಸಾಯ ಮತ್ತು ಗ್ರಾಮೀಣಾಭಿವೃದ್ಧಿಗಾಗಿ ಸರಾಸರಿ ವಾರ್ಷಿಕವಾಗಿ 98 ಸಾವಿರ ಕೋಟಿ ಹಣವನ್ನು ಮೀಸಲಿಟ್ಟಿದ್ದರೂ ಕೂಡ ಗ್ರಾಮೀಣ ಪ್ರದೇಶದ ರೈತರ ವಾರ್ಷಿಕ ಆದಾಯ ಕಡಿಮೆ ಇದೆ ಇಲ್ಲವೇ ಸ್ಥಿರವಾಗಿದೆ ಅಥವಾ ಕಸಿಯುತ್ತಿದೆ. ಜೀವನದ ನಿರ್ವಹಣೆಗೆ ಅಗತ್ಯವಾದ ಕನಿಷ್ಠ ಆದಾಯ ಮಿತಿಯನ್ನು ಗೊತ್ತುಮಾಡಲು ಸರ್ಕಾರದ ಬಜೆಟ್ ಸಮರ್ಥವಾಗಿಲ್ಲ. ಅಲ್ಲದೇ ಕೃಷಿಗೆ ಪೂರಕವಾದ ಎಣ್ಣೆ ಉತ್ಪಾದನೆ, ಬಟ್ಟೆ, ಉತ್ಪಾದನೆ, ಮರ ಮುಗ್ಗಟ್ಟುಗಳ ಉತ್ಪಾದನೆ, ದಿನ ಬಳಕೆಯ ವಸ್ತುಗಳ ಉತ್ಪಾದನೆಗಳಿಗೆ ಸಂಬಂಧಿಸಿದ ಉದ್ಯೋಗದ ಬಗ್ಗೆ ಬಜೆಟ್ ಚಿಂತನೆ ಮಾಡೇ ಇಲ್ಲ. ಕೇವಲ ನಗರಗಳಲ್ಲಿ ಉಂಟಾಗಬಹುದಾದ ನಿರುದ್ಯೋಗಕ್ಕೆ ಉದ್ಯೋಗಗಳನ್ನು ನಿರ್ಮಿಸುವ ಆಲೋಚೆಗೆ ಮಾಡಿದೆ. 2011ರ ಜನಗಣತಿಯ ವರದಿಯ ಪ್ರಕಾರ 25 ರಿಂದ 29 ವರ್ಷದ ಒಳಗಿನ ನಿರುದ್ಯೋಗಿ ಯುವಕರ ಸಂಖ್ಯೆ ಶೇಕಡ 18ಕ್ಕೆ ತಲುಪಿದೆ. ಸುಮಾರು ನಾಲ್ಕು ಕೋಟಿಗೂ ಹೆಚ್ಚು ಯುವಕರು ನಿರುದ್ಯೋಗಿಗಳಾಗಿದ್ದಾರೆ. ಚುನಾವಣೆ ಮುಗಿದ ಕೂಡಲೆ ಪ್ರಧಾನಮಂತ್ರಿ ಮೋದಿಯವರು ಒಳ್ಳಯ ದಿನಗಳು ಬರಲಿವೆಯೆಂದು ಭರವಸೆ ಕೊಟ್ಟಿದ್ದಾರೆ. ಆದ್ದರಿಂದ ದೇಶದಲ್ಲಿ ಈಗ ಕಷ್ಟದಲ್ಲಿರುವ ಜನರೆಲ್ಲರು ಒಳ್ಳೆಯ ದಿನಗಳಿಗಾಗಿ ನಿರೀಕ್ಷಿಸುತ್ತಿರುವುದು ಸಹಜವಾಗಿಯೇ ಇದೆ. ಆನರಲ್ಲಿ ಮತ್ತು ನಿರುದ್ಯೋಗದ ಯುವಕರಲ್ಲಿ ಸೃಷ್ಟಿಯಾಗಿರುವ ಈ ನಿರೀಕ್ಷೆ ಕೈಗೂಡಬೇಕಾದರೆ ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಯ ಕಡೆಗೆ ಕೇಂದ್ರ ಬಜೆಟ್ ತನ್ನ ದೃಷ್ಟಿಯನ್ನು ಹರಿಸಬೇಕಿತ್ತು. ಆದರೆ ಅದು ಬುಲೆಟ್ ಟ್ರೈನ್ ಸಂಚಾರದ ಮೂಲಕ ಅಭಿವೃದ್ಧಿಯನ್ನು ಸಾಧಿಸಿ ದೇಶದ ಅಭಿವೃದ್ಧಿಯನ್ನು ಸಾಧಿಸಲು ಪ್ರಯತ್ನಿಸಿದೆ. ದೇಶದಲ್ಲಿ ಸುಮಾರು 150 ವರ್ಷಗಳು ರೈಲು ಸಂಚಾರ ಪ್ರಾರಂಭವಾದಾಗಲಿಂದ ದೇಶದ ಆರ್ಥಿಕ, ಔದ್ಯೋಗಿಕ ಮತ್ತು ಸಾಮಾಜಿಕ ಬಳವಣಿಗೆಯ ಮೇಲೆ ಆದ

ದುಷ್ಪರಿಣಾಮಗಳು ಕಣ್ಣ ಮುಂದಿವೆ. ಈಗ ಬುಲೆಟ್ ಟ್ರೈನ್ಗಳ ಮೂಲಕ ಅಂಥದೇ ದುಷ್ಪರಿಣಾಮಗಳನ್ನು ಹೆಚ್ಚಿಸುವ ಪ್ರಯತ್ನ ಈ ಬಜೆಟ್ಟಿನಿಂದಾಗಿದೆ.


ಕೆಲವು ರಾಜ್ಯಗಳ ಕೃಷಿ ವಿಶ್ವವಿದ್ಯಾಲಯಗಳನ್ನು ಮತ್ತು ಕೆಲವು ತೋಟಗಾರಿಕೆ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು 200 ಕೋಟಿ ಹಣವನ್ನು ಕೊಡಲಾಗಿದೆ. ಈಗಾಗಲೆ ದೇಶದಲ್ಲಿರುವ ಅಂತಹ ವಿಶ್ವವಿದ್ಯಾಲಯಗಳಿಂದ ಎಂಥ ಬಗೆಯ ಪ್ರಯೋಜನವಾಗಿದೆ ಎಂಬುದು ವಿವಾದಾಸ್ಪದ ವಿಷಯವಾಗಿದೆ. ಅನೇಕ ಸಲ ಈ ವಿಶ್ವವಿದ್ಯಾಯಲಗಳು ಹೊರತರುವ ಸಂಶೋಧನೆಗಳು ರೈತರನ್ನು ದಾರಿ ತಪ್ಪಿಸಿವೆ. ಪ್ರಯೋಗಾಲಯದಲ್ಲಿ ಸಂಶೋಧಿತಗೊಂಡ ಶೋಧನೆ ಭೂಮಿಯ ಮೇಲೆ ಬಂದಾಗ ಆಗುವ ಫಲಿತಾಂಶಗಳೇ ಬೇರೆ. ಬೀಟಿ ಹತ್ತಿ, ಬೀಟಿ ಬದನೆ ಮುಂತಾದ ಅನೇಕ ಜೀವಶಾಸ್ತ್ರ ತಳಿಗಳು ಏಬೆಲ್ಲಾ ಸಮಸ್ಯೆಗಳನ್ನು ರೈತರಿಗೆ ಮಾಡಿದೆ ಎಂಬುದನ್ನು ಸರ್ಕಾರ ಗಮನಿಸಿಲ್ಲ. ಅಂತಹ ಶೋಧನೆಗಳಿಗೆ ಸರ್ಕಾರದಿಂದಲೇ ವ್ಯವಸ್ಥಿತವಾಗಿ ಮೌಲ್ಯಮಾಪನ ನಡೆದಿಲ್ಲ. ನೈಜ ಸ್ಥಿತಿಯ ಅರಿವಿಲ್ಲದೆಯೇ ರೈತರ ಅಭಿವೃದ್ಧಿಯ ಹೆಸರಿನಲ್ಲಿ ಇಂಥ ಉಪಕ್ರಮಗಳನ್ನು ಸರ್ಕಾರ ಕೈಗೊಳ್ಳುವುದು ಗ್ರಾಮ ಜೀವನದ ಮೇಲೆ ಬರೆ ಎಳೆದಂತೆಯೇ ಸರಿ.

ಹೊಸ ಬದಲಾವಣೆಯನ್ನು ತರುವ ದೃಷ್ಟಿಯಿಂದ ಮತ್ತು ತಮ್ಮೆಲ್ಲರ ಬದುಕು ಹೊಸನಾಗಲಿ ಮತ್ತು ನೆಮ್ಮದಿಯಿಂದ ಕೂಡಿರಲಿ ಎಂಬ ಮಹದಾಸೆಯಿಂದ ಹಳೆಯ ಸರ್ಕಾರವನ್ನು ತೆಗೆದು ಹಾಕಿ ಹೊಸ ಸರ್ಕಾರ ಬರುವಂತೆ ದೇಶದ ಜನತೆ ಮಾಡಿತು. ಆದರೆ ಹೊಸ ಸರ್ಕಾರದ ಬಜೆಟ್ ಕೂಡ ಹಿಂದಿನ ಸರ್ಕಾರಗಳು ಮಂಡಿಸಿದ್ದು ಬಜೆಟ್ಟುಗಳಂತೆಯೇ ಅಭಿವೃದ್ಧಿಯೆಂಬ 'ಕಾಡು ಕುದುರೆ ಹತ್ತಿ ಬಂದಿದೆ' ಆದ್ದರಿಂದ ಈ ಗ್ರಾಮ ಭಾರತಕ್ಕೆ ಈ ಬಜೆಟ್ಟಿನಿಂದ ಯಾವ ಹೊಸತನವೂ ಕಾಣುತ್ತಿಲ್ಲ. ಪಾಶ್ಚಾತ್ಯ ಮಾದರಿಯ ಆರ್ಥಿಕ ನೀತಿ ಮತ್ತು ಕೈಗಾರಿಕಾ ನೀತಿಗಳನ್ನೊಳಗೊಂಡ ಕಾರ್ಬನ್ ಕಾಪಿ ಮಾಡಿದೆ. ಗ್ರಾಮ ಪ್ರಧಾನ ಕೃಷಿ ಆಧಾರಿತ ವಿಕೇಂದ್ರೀಕರಣದಿಂದೊಳಗೂಡಿದ ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ ಪರಿಸರ ಪ್ರೇಮಿಯಾದ ಉದ್ಯೋಗಗಳನ್ನು ಸೃಷ್ಟಿಸುವ ಹೊಸ ಹಾದಿಯ ಅಭಿವೃದ್ಧಿಯನ್ನು ಈ ಬಜೆಟ್ ಪ್ರಾರಂಭಿಸಿದ್ದರೆ ಗ್ರಾಮ ಭಾರತ ನಿಟ್ಟುಸಿರು ಬಿಡುತ್ತಿತ್ತು. ಆದರೆ ಹಾಗಾಗದೆ ಗ್ರಾಮ ಭಾರತವನ್ನು ಪ್ಯಾರೀಸ್ ಭಾರತ, ಸಿಂಗಪೂರ್ ಭಾರತ ಮತ್ತು ನ್ಯೂಯಾರ್ಕ್ ಭಾರತವನ್ನಾಗಿ ಮಾಡಲು ಹೊರಟಿರುವುದು ಮತದಾರರು ಇಟ್ಟುಕೊಂಡಿದ್ದ ಆಶೋತ್ತರಗಳಿಗೆ ವಿರುದ್ಧವಾಗಿ. ಕೇಂದ್ರಿತ ಮತ್ತು ಪರಿಸರ ವಿರೋಧಿ ಕೈಗಾರಿಕೆಗಳಿಗಾಗಿಯೇ ದೇಶದ ತುಂಬ ಅನೇಕ ಬಗೆಯ ಗಣಿಕೈಗಾರಿಕೆ ನಡೆಯುತ್ತಿದೆ. ಅಕ್ರಮವಾಗಿದ್ದ ಗಣಿ ಕೈಗಾರಿಕೆಗಳನ್ನು ಸಕ್ರಮಗೊಳಿಸಲು ಈ ಬಜೆಟ್ಟಿನಲ್ಲಿ ಮುಂದಾಗಿರುವುದು ಮತ್ತು ಖನಿಜ ಸಂಪತ್ತು

ಅಭಿವೃದ್ಧಿ ಕಾಯ್ದೆ 1957ಕ್ಕೆ ಅಗತ್ಯ ತಿದ್ದುಪಡಿ ತರುವುದರ ಮೂಲಕ ಪರಿಸರಕ್ಕೆ ಬಹು ದೊಡ್ಡ ಆಘಾತ ಉಂಟು ಮಾಡಿದೆ.
ಈ ಮೊದಲಿದ್ದ ಸರ್ಕಾರವೂ ಕೂಡ ರೈತರ ಅಭಿವೃದ್ಧಿಗಾಗಿ ಕೋಟಿಗಟ್ಟಲೇ ಹಣವನ್ನು ಕಡಿಮೆ ಬಡ್ಡಿ ದರದಲ್ಲಿ ಕೊಟ್ಟಿತ್ತಾದರೂ ಇತ್ತೀಚೆಗೆ ಪ್ರಕಟವಾದ ರಾಷ್ಟ್ರೀಯ ಅಪರಾಧ ದಾಖಲೆಗಳ ಸಮಿತಿಯ 2013ರ ವರದಿಯ ಪ್ರಕಾರ 11,779 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರೈತರ ಅನುಕೂಲಕ್ಕೆ ಕೊಟ್ಟ ಸಾಲ ಅವರ ಜೀವನಕ್ಕೇ ಮುಳುವಾಗುತ್ತಿರುವಾಗ ಬಜೆಟ್ಟಿನಲ್ಲಿ ಕೊಡಲಾಗಿರುವ 8 ಲಕ್ಷ ಕೋಟಿ ಹಣ ರೈತರನ್ನು ನಿಜವಾಗಲು ಉದ್ಧರಿಸವುದೆಂದು ಹೇಗೆ ಹೇಳಲು ಸಾಧ್ಯ? ಸಾಲ ಕೊಡುವುದರಿಂದಲೇ ರೈತರ ಮತ್ತು ಬಡವರ ಉದ್ಧಾರವಾಗುತ್ತದೆಂಬುದು ತಪ್ಪು. 2014–15ನೇ ಸಾಲಿನ ಬಜೆಟ್ "ಹಳೆಯ ಮದ್ಯ ಹೊಸ ಸೀಸೆಯಲ್ಲಿ" ಎಂಬ ಮಾತಿನಂತಿದೆ. 'ಕೃಷಿ ನೀರಾವರಿ ಯೋಜನೆ'ಗಾಗಿ 14,389 ಕೋಟಿ ಹಣವನ್ನೇನೋ ನೀರಾವರಿಗೆ ಮೀಸಲಿಡಲಾಡಿದೆಯಾದರೂ ನಗರಗಳ ಅತಿಯಾದ ಬೆಳವಣಿಗೆಯಿಂದ ಕೆರೆಗಳು ಮತ್ತು ಇತರೆ ನೀರಿನ ಮೂಲಗಳು ನಶಿಸಿ ಹೋಗುತ್ತಿವೆ. ನೀರಾವರಿಗೆಂದು ಕಟ್ಟಲಾಗುವ ಹೊಸ ಅಣೆಕಟ್ಟು ಮತ್ತು ಹಳೆ ಅಣೆಕಟ್ಟುಗಳ ಎತ್ತರ ಎತ್ತರಿಸುವುದರಿಂದ ಅನೇಕ ಗ್ರಾಮಗಳು ಮುಳುಗುವುದರ ಜೊತೆಗೆ ಸಾವಿರಾರು ಎಕರೆ ಕಾಡು ನಾಶವಾಗುತ್ತದೆ.

ಬಜೆಟ್ಟಲ್ಲಿ ರಕ್ಷಣಾ ಇಲಾಖೆಗೆ ಕಳೆದ ಸಾಲಿಗಿಂತ ಶೇಕಡ 12.43ರಷ್ಟು ಹೆಚ್ಚು ಹಣ ಮೀಸಲಿಡಲಾಗಿದೆ. ಸ್ವಾತಂತ್ರ್ಯ ಬಂದಾಗಿನಿಂದ ಮಂಡಿತವಾದ ಕೇಂದ್ರ ಬಜೆಟ್ಟುಗಳೆಲ್ಲವೂ ರಕ್ಷಣಾ ಇಲಾಖೆಗೆ ಹೆಚ್ಚು ಹಣವನ್ನು ಕೊಡುತ್ತಲೇ ಬಂದಿವೆ. ಜಾಗತಿಕ ರಾಜಕಾರಣದಿಂದಾಗಿ ರಕ್ಷಣಾ ವ್ಯವಸ್ಥೆಗೆ ಹೆಚ್ಚು ಮೀಸಲಿಡಬೇಕಾಗಿ ಬಂದಿರಬಹುದು. ಆದರೆ ಅದರಿಂದ ಮೂಲ ಸಂಪನ್ಮೂಲಗಳ ಮೇಲೆ ಉಂಟಾಗುತ್ತಿರುವ ಭಾರ ಮತ್ತು ಪರಿಸರ ಹಾನಿ ಹಾಗೂ ಸಮಾಜದ ಆರೋಗ್ಯಪೂರ್ಣ ಬೆಳವಣಿಗೆ ಕುಂಠಿತವಾಗುವುದರ ಬಗ್ಗೆ ಆಲೋಚನೆ ಮಾಡುವುದು ಅಗತ್ಯ. ಆಧುನಿಕ ಯುಗದಲ್ಲಿ ದೇಶದ ರಕ್ಷಣೆಯ ವಿಚಾರಕ್ಕೆ ಅಂತ್ಯವೇ ಇಲ್ಲ. ತಂತ್ರಜ್ಞಾನ ಬೆಳೆದಂತೆಲ್ಲಾ ರಕ್ಷಣೆಯ ವಿಚಾರ ಸಂಕೀರ್ಣವಾಗುತ್ತಲೇ ಹೋಗುತ್ತದೆ. ರಕ್ಷಣಾ ಖರ್ಚಿಗೆ ಮಿತಿಯೇ ಇಲ್ಲದಂತಾಗುತ್ತದೆ. ಆದ್ದರಿಂದ ದೇಶದ ರಕ್ಷಣೆಯ ವಿಚಾರದಲ್ಲಿ ಗ್ರಾಮಗಳು ಯಾವ ರೀತಿ ನೆರವಾಗಬಲ್ಲವೆಂದು ಆಲೋಚಿಸುವುದು ಅಗತ್ಯ. ರಕ್ಷಣಾ ಪಡೆ ದೇಶದ ಗಡಿಯನ್ನು ಕಾಯುವ ವಿಷಯದಲ್ಲಿ ಮುಂಚೂಣಿಯಲ್ಲಿದ್ದರೆ ಗ್ರಾಮಗಳು ರಕ್ಷಣೆಯ ಎರಡನೆ ಸುತ್ತಿನ ಕೋಟೆಗಳಾಗಿದೆ. ದೇಶದ ಎಲ್ಲ ಗ್ರಾಮಗಳು ಆರ್ಥಿಕವಾಗಿ ಬಲಿಷ್ಠವಾದರೆ, ಆಹಾರ ಮತ್ತು ಬಟ್ಟೆ ಇತ್ಯಾದಿ ವಿಷಯಗಳಲ್ಲಿ ಸ್ವಾವಲಂಬಿತವಾದರೆ ದೇಶದ ರಕ್ಷಣೆಗೆ ದೊಡ್ಡ ಬಲ ಬಂದಂತಾಗುತ್ತದೆ. ಈ ಅಂಶವನ್ನು ಸ್ವತಂತ್ರ ಭಾರತದ ಯಾವ ಸರ್ಕಾರವೂ

ಗಮನಕ್ಕೆ ತೆಗೆದು ಕೊಂಡಂತೆ ಕಾಣುತ್ತಿಲ್ಲ. ಕೇವಲ ಬಾಹ್ಯ ಶಕ್ತಿಯನ್ನೇ ಬಲಪಡಿಸಲು ಹೊರಟಿವೆಯೇ ಹೊರತು ಆಂತರಿಕ ಶಕ್ತಿಯನ್ನ ಬಲಪಡಿಸಲು ಚಿಂತಿಸಿಲ್ಲ. ಅತ್ಯಾಧುನಿಕ ಸೌಲಭ್ಯಗಳು ಲಭ್ಯವಿರುವ ಅವುಗಳನ್ನು ಉಪಯೋಗಿಸಿ ಗ್ರಾಮಗಳನ್ನು ದೇಶದ ಭದ್ರ ಕೋಟೆಯನ್ನಾಗಿ ರೂಪಿಸುವುದು ಅಗತ್ಯವೆನಿಸುತ್ತದೆ. ಆಗ ದೇಶದ ರಕ್ಷಣಾ ವ್ಯವಸ್ಥೆಗೆ ಆಗುತ್ತಿರುವ ಸಿಂಹ ಪಾಲು ಖರ್ಚು ತಗ್ಗಿ ಗ್ರಾಮಾಭಿವೃದ್ಧಿ ಮೂಲಕ ಭಾರತವನ್ನು ಸಶಕ್ತ ಮತ್ತು ಸಬಲ ರಾಷ್ಟ್ರವನ್ನಾಗಿ ಮಾಡಬಹುದು. ಒಟ್ಟಾರೆ ಕೇಂದ್ರ ಬಜೆಟ್ ಗ್ರಾಮಭಾರತದ ದೃಷ್ಟಿಯಲ್ಲಿ ಫೇಲ್.



ಶ್ರೀವತ್ಸಾಂಕಂ ಮಹೋರಸ್ಕಂ ವನಮಾಲಾವಿರಾಜಿತಂ।
ಶಂಖಚಕ್ರಧರಂ ದೇವಂ ಕೃಷ್ಣಂ ವಂದೇ ಜಗದ್ಗುರುಂ॥

ಶ್ರೀ ವನಮಾಲಿ ಚಾರಿಟಬಲ್ ಟ್ರಸ್ಟ್ (ರಿ), ಮೈಸೂರು

ಶ್ರೀ ವನಮಾಲಿ ಸೇವಾಪ್ರಶಸ್ತಿ

ಹಾಗೂ

ಪದ್ಮಶ್ರೀ ಡಾ. ಮತ್ತೂರು ಕೃಷ್ಣಮೂರ್ತಿ ಗೌರವಪ್ರಶಸ್ತಿ

ಸಮಾರಂಭ - 2014

ದಿನಾಂಕ : 9-8-2014, ಶನಿವಾರ ಸಂಜೆ 5.00 ಗಂಟೆ

ಸ್ಥಳ : ಶ್ರೀ ವಿವೇಕಾನಂದ ಸಭಾಂಗಣ
ಮಹಾಜನ ಕಾಲೇಜು ಆವರಣ
ಜಯಲಕ್ಷ್ಮೀಪುರಂ, ಮೈಸೂರು-570 012

ದಿವ್ಯಸಾನ್ನಿಧ್ಯ : ಪರಮಪೂಜ್ಯ ಜಗದ್ಗುರು
ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು
ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

ಪ್ರಶಸ್ತಿಪುರಸ್ಕೃತರು

ಶ್ರೀ ವನಮಾಲಿ ಸೇವಾಪ್ರಶಸ್ತಿ

ಪ್ರೊ. ಷ. ಶೆಟ್ಟರ್

(ಖ್ಯಾತ ಇತಿಹಾಸಜ್ಞರು, ಹಿರಿಯ ಸಂಶೋಧಕರು)

ಪದ್ಮಶ್ರೀ ಡಾ. ಮತ್ತೂರು ಕೃಷ್ಣಮೂರ್ತಿ ಗೌರವಪ್ರಶಸ್ತಿ

ಶ್ರೀ ಸುರೇಂದ್ರ ಕೌಲಗಿ

(ಹಿರಿಯ ಸರ್ವೋದಯ ಕಾರ್ಯಕರ್ತರು, ಮೇಲುಕೋಟೆ)

ಪುರಸ್ಕೃತರನ್ನು ಕುರಿತು :

ಡಾ. ಓ.ಎಲ್. ನಾಗಭೂಷಣಸ್ವಾಮಿ (ಖ್ಯಾತ ವಿಮರ್ಶಕರು, ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರು)
ಡಾ. ಬೋರೇಗೌಡ ಚಿಕ್ಕಮರಳಿ (ಪ್ರಾಧ್ಯಾಪಕರು, ವಿಜಯ ಪ್ರಥಮದರ್ಜೆ ಕಾಲೇಜು, ಪಾಂಡವಪುರ)

ಸರ್ವರಿಗೂ ಆದರದ ಸ್ವಾಗತ — ಶ್ರೀ ವನಮಾಲಿ ಚಾರಿಟಬಲ್ ಟ್ರಸ್ಟ್ (ರಿ), ಮೈಸೂರು

ಅಹಿಂಸೆಯ ಆಶ್ರಯದಲ್ಲಿ ವಿಜ್ಞಾನ ಸುರಕ್ಷಿತ!

ಪ್ರಸ್ತುತ ಜಾಗತಿಕ ಹಿಂಸೆಯಲ್ಲಿ ವಿಜ್ಞಾನದ ಕೊಡುಗೆ ಗಣನೀಯವಾಗಿದೆ. ಆದರೆ ಅಂಥ ವಿಜ್ಞಾನ ಅಹಿಂಸೆಯಲ್ಲಿ ಹೇಗೆ ಸುರಕ್ಷಿತವಾಗಿದೆ ಎಂಬ ವಿಪರ್ಯಾಸವನ್ನು ಈ ಲೇಖನ ತೋರಿಸುತ್ತದೆ. –ವಿನೋಬಾ

ಸಾಮಾನ್ಯವಾಗಿ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಒಂದೇ ವಿಷಯವೆಂದು ತಿಳಿಯಲಾಗುತ್ತದೆ. ಆದರೆ ಅದು ಆ ರೀತಿ ಇಲ್ಲ. ವಿಜ್ಞಾನದ ಸಹಾಯದಿಂದ ದೊಡ್ಡ ದೊಡ್ಡ ಯಂತ್ರಗಳನ್ನು ಮಾಡುವಂತೆ ಚಿಕ್ಕ ಯಂತ್ರಗಳನ್ನು ಸಹ ಮಾಡಲಾಗುತ್ತದೆ. ವಿಜ್ಞಾನದ ಸಹಾಯದಿಂದ ಕೇಂದ್ರಿತ ಮತ್ತು ವಿಕೇಂದ್ರಿತ ಎರಡೂ ಪ್ರಕಾರದ ಸಾಧನಗಳನ್ನು ಮಾಡಬಹುದಾಗಿದೆ. ಬಹು ದೊಡ್ಡ ಎಂಜಿನ್ನನ್ನು ಮಾಡಬಹುದು ಮತ್ತು ಚಿಕ್ಕ ಗಡಿಯಾರವನ್ನು ಸಹ ಮಾಡಬಹುದು. ಆತ್ಮಜ್ಞಾನ ಒಂದು ಸ್ವಚ್ಛ, ಶುದ್ಧ ವಿಚಾರ. ಅದಕ್ಕನುಸಾರ ನಾವು ಜೀವನದಲ್ಲಿ ಅದರ ಉಪಯೋಗ ಹೇಗೆ ಮಾಡಬೇಕು ಎಂಬುದನ್ನು ಯೋಚಿಸಬೇಕಾಗಿದೆ. ಅದೇ ರೀತಿ ವಿಜ್ಞಾನ ಕೂಡ ಒಂದು ಸ್ವಚ್ಛ ಶುದ್ಧ ವಿಚಾರ. ಅದು ನಮಗೆ ಶರೀರ, ಸೃಷ್ಟಿ ಮುಂತಾದವುಗಳ ಜ್ಞಾನವನ್ನು ದೊರೆಕಿಸಿಕೊಡುತ್ತದೆ. ನಿಜವಾಗಿ ಯಂತ್ರಯುಗದಲ್ಲಿ ತಂತ್ರಜ್ಞಾನದೊಂದಿಗೆ ವಿಜ್ಞಾನದ ಯಾವ ಸಂಬಂಧವೂ ಇಲ್ಲ. ಒಂದು ವೇಳೆ ಯಾಂತ್ರೀಕರಣದಿಂದ ಭಿನ್ನವಾದ ಯಾವುದಾದರೊಂದು ಹೊಸ ವ್ಯವಸ್ಥೆಯ ನಿರ್ಮಾಣವಾಗುವುದಾದರೆ ಅದಕ್ಕು ಕೂಡ ವಿಜ್ಞಾನ ಸಹಾಯಕವಾಗುತ್ತದೆ. ವಿದ್ಯುತ್‌ಚ್ಛಕ್ತಿಗಿಂತ ಹೆಚ್ಚಾಗಿ ಅಣುಶಕ್ತಿಯ ವಿಕೇಂದ್ರಿಕರಣವಾಗಬಲ್ಲದು. ಒಂದು ವೇಳೆ ಅಣುಶಕ್ತಿ ದೊಡ್ಡ ಪ್ರಮಾಣದಲ್ಲಿ ದೊರೆಯಲಾರಂಭಿಸಿದರೆ ಮತ್ತು ರಚನಾತ್ಮಕ ಕಾರ್ಯಕ್ಕಾಗಿ ಅದರ ಉಪಯೋಗವನ್ನು ಮಾಡಬೇಕೆಂದು ತೀರ್ಮಾನವಾದರೆ ಆಗ ಆ ಉದ್ದೇಶಕ್ಕಾಗಿ ಚಿಕ್ಕಚಿಕ್ಕ ಸಾಧನಗಳು ತಯಾರಾಗುವವು. ಮನುಷ್ಯ ಮನೆಯಲ್ಲಿ ಕುಳಿತೆ ಅವುಗಳ ಉಪಯೋಗವನ್ನು ಮಾಡಿಕೊಳ್ಳಬಲ್ಲ. ಆದ್ದರಿಂದ ನಾವು ವಿಜ್ಞಾನವೆಂದರೆ ಯಂತ್ರಯುಗ ಎಂಬ ಭ್ರಮೆಯಲ್ಲಿ ಬೀಳದಿರೋಣ. ವಿಜ್ಞಾನ ಯಾವ ದಿಕ್ಕಿಗೆ ನಾವು ಹೋಗಬಯಸುತ್ತೇವೊ ಅದಕ್ಕನುಸಾರವಾಗಿ ಅದರ ಉಪಯೋಗದ ತೀರ್ಮಾನವಾಗುವುದು. ಸ್ವಲ್ಪ ಊಹೆಮಾಡಿ ನಾಳೆ ಒಂದುವೇಳೆ ಮನಃಶಾಸ್ತ್ರ ಮನುಷ್ಯನಿಗೆ ಹೆಚ್ಚಿನ ಪೋಷಣೆ ಗಾಳಿಯಿಂದ ಸಿಗಬೇಕೆಂದು ತೀರ್ಮಾನಮಾಡಿದರೆ ವಿಜ್ಞಾನ ಕೂಡ ಆ ದಿಕ್ಕಿನಲ್ಲಿಯೇ ಸಂಶೋಧನೆ ಮಾಡುವುದು. ಗಾಳಿಯಿಂದ ಪೋಷಕಾಂಶವನ್ನು ಪಡೆಯುವ ಯಾವುದಾದರೂ ಪದ್ಧತಿ ಕೈಗೆಟುಕಿದರೆ ನಮ್ಮ ಇಡೀ ಜೀವನ ಪದ್ಧತಿಯಲ್ಲಿಯೇ ಬದಲಾದಂಥ ಪರಿಸ್ಥಿತಿ

ಉಂಟಾಗುವುದು.

ಹಗಲು ಮತ್ತು ರಾತ್ರಿ ತೆರೆದ ಆಕಾಶದ ಕೆಳಗಡೆಗೆ ವಾಸಿಸುವುದೇ ಮನುಷ್ಯನ ಜೀವನಕ್ಕೆ ಅತ್ಯಂತ ಪೋಷಕವಾದುದು ಎಂದು ತೀರ್ಮಾನವಾದರೆ ಇಂದು ಕಟ್ಟಲಾಗುತ್ತಿರುವಂಥ ಮನೆಗಳನ್ನು ಯಾರೂ ಕಟ್ಟುವುದಿಲ್ಲ. ಕೇವಲ ಚಳಿ-ಬಿಸಿಲು-ಮಳೆ ಇವುಗಳಿಂದ ರಕ್ಷಿಸಿಕೊಳ್ಳಬೇಕೆಂಬ ದೃಷ್ಟಿಯಿಂದಲೇ ಮನೆ ಕಟ್ಟಲ್ಪಡುವವು. ನಂತರ ಮನುಷ್ಯನು ಸ್ವಾಭಾವಿಕವಾಗಿಯೇ ಹೊಲಗಳಲ್ಲಿ ಹೆಚ್ಚು ಸಮಯ ಕಳೆಯುವನು.

ಸ್ಪರ್ಶದಿಂದ ಮನುಷ್ಯನಿಗೆ ಯಾವ ಆನಂದ ಸಿಗುತ್ತದೋ ಅದು ಕೇವಲ ದರ್ಶನ ಮಾತ್ರದಿಂದ ಸಿಗುವಂಥ ರೀತಿಯನ್ನು ವಿಜ್ಞಾನ ಕಂಡುಹಿಡಿದಿದೆ ಎಂದು ಭಾವಿಸಿ. ಈ ಮಾತನ್ನು ನಾನು ನನ್ನ ಸ್ವಂತ ಅನುಭವದಿಂದ ಹೇಳುತ್ತಿದ್ದೇನೆ, ವಿಜ್ಞಾನ ಈ ಪ್ರಕಾರದ ಸಂಶೋಧನೆ ಮಾಡಬೇಕಿದೆ. ಉಪನಿಷತ್ತಿನಲ್ಲಿ ಒಂದು ವಚನ ಬರುತ್ತದೆ, ನ ವೈ ದೇವಾಃ ಅಶಂತಿ ನ ಪಿಬಂತಿ ಅಮೃತಂ ದೃಷ್ಟ್ವಾ ತೃಪ್ತ್ಸಂತಿ - ದೇವರು ತಿನ್ನುವುದಿಲ್ಲ, ಕುಡಿಯುವುದಿಲ್ಲ, ಕೇವಲ ಅಮೃತ ದರ್ಶನ ಮಾತ್ರದಿಂದಲೇ ಅವನಿಗೆ ತೃಪ್ತಿಯಾಗುವುದು. ಇಂಥ ಮನೋಭಾವ ನಿಜವಾಗಿಯೂ ಪ್ರಾಪ್ತವಾದರೆ ಮನುಷ್ಯನಿಗೆ ಸಂತಾನೆಚ್ಛೆ ಇರುವುದಿಲ್ಲ. ವಿಜ್ಞಾನದ ಕಾರಣದಿಂದ ಮನುಷ್ಯನ ಜೀವನ ಹೆಚ್ಚು ಜಟಿಲವಾಗುತ್ತದೆಂಬ ತಿಳುವಳಿಕೆ ಏನಿದೆ, ಅದು ತಪ್ಪು. ಏಕೆಂದರೆ ವಿಜ್ಞಾನ ಯಾವ ದಿಕ್ಕಿಗೆ ಹೋಗಬೇಕೆಂಬುದನ್ನು ನಾವು ನಿರ್ಣಯಿಸಬೇಕಿದೆ. ವಿಜ್ಞಾನ ಬೆಳೆದಂತೆಲ್ಲಾ ನಗರಗಳು ಮುರಿದು ಬೀಳುತ್ತ ಹೋಗುವವು. ಏಕೆಂದರೆ ಮನುಷ್ಯ ದಟ್ಟವಾದ ವಸತಿಗಳನ್ನು ಇಷ್ಟಪಡುವುದಿಲ್ಲ. ಇಂದು ವಿಜ್ಞಾನದ ಉಪಯೋಗ ಕೇಂದ್ರಿತ ಸಮಾಜ ರಚನೆಗಾಗಿ ಆಗುತ್ತಿದೆ. ಭವಿಷ್ಯದಲ್ಲಿ ಅದರ ಉಪಯೋಗ ವಿಕೇಂದ್ರಿತ ಸಮಾಜ ವ್ಯವಸ್ಥೆಗಾಗಿ ಕೂಡ ಆಗುವುದು. ಆಗ ಪ್ರತಿ ಮನೆಯ ಮುಂದೆ ಚಿಕ್ಕದಾದ ಹೊಲವಿರುವುದು ಮತ್ತು ಮನೆಗಳು ದೂರದೂರದ ಅಂತರದಲ್ಲಿ ಇರುವವು.

ನಾಳೆ ಒಂದು ವೇಳೆ ಮನೆಯಲ್ಲಿ ಕುಳಿತೇ ದಿಲ್ಲಿಯಲ್ಲಿರುವ ಮನುಷ್ಯನನ್ನು ನೋಡಬಹುದಾದರೆ ಮತ್ತು ಅವನೊಂದಿಗೆ ಮಾತನಾಡಬಹುದಾದರೆ ಅಷ್ಟಕ್ಕಾಗಿ ಯಾರು ರೈಲಿನಲ್ಲಿ ಕುಳಿತು ದಿಲ್ಲಿಯವರೆಗೆ ದೀರ್ಘ ಪ್ರವಾಸ ಮಾಡುವ ತೊಂದರೆಯನ್ನು ತೆಗೆದುಕೊಳ್ಳುತ್ತಾರೆ? ಆಗ ಮನುಷ್ಯನಿಗೆ ತನ್ನ ಸ್ಥಳದಲ್ಲಿಯೇ ಕುಳಿತು ವಿರಾಟ್‌ಜೀವನದ ಅನುಭವ ಬರುವುದು. ಆದ್ದರಿಂದ ವಿಜ್ಞಾನದ ಗರ್ಭದಲ್ಲಿ ಏನೇನು ಅಡಗಿದೆಯೋ ಎಂಬುದನ್ನು ಯಾರು ಹೇಳಬಲ್ಲರು!


ಇಂದು ವಿಜ್ಞಾನ ಬಂಡವಾಳವಾದದೊಂದಿಗೆ ಸೇರಿಕೊಂಡಿದೆ. ಆದರೆ ವಿಕೇಂದ್ರಿತ ಸಮಾಜ ವ್ಯವಸ್ಥೆಯ ಅಗತ್ಯ ಉಂಟಾದಾಗ ವಿಜ್ಞಾನದ ದಿಕ್ಕು ಕೂಡ ಬದಲಾಗುವುದು. ಇಂದು ಜನಸಂಖ್ಯೆ ನಿರಂತರ ಬೆಳೆಯುತ್ತಿದೆ. ಈ ಸಮಸ್ಯೆಯ ಪರಿಹಾರಕ್ಕಾಗಿ ನಪುಂಸಕ ಜನರ ಸಂಖ್ಯೆಯನ್ನು ಹೆಚ್ಚಿಸಲಾಗುತ್ತಿದೆ. ಜನರನ್ನು ನಪುಂಸಕರನ್ನಾಗಿ ಮಾಡಬೇಕೆಂಬುದು ಇಂದಿನ ಬೇಡಿಕೆಯಾಗಿದೆ. ಆದ್ದರಿಂದ ವಿಜ್ಞಾನ ಈ ಬೇಡಿಕೆಯನ್ನು ಪೂರೈಸಲು ಸಹಾಯ ಮಾಡುತ್ತಿದೆ. ಅದೇ ರೀತಿ ಈಶ್ವರನು

ಕೂಡ ಯಾವುದು ಮನುಷ್ಯನ ಬೇಡಿಕೆ ಇದೆಯೋ ಅದನ್ನು ಪೂರೈಸುತ್ತಾನೆ. ನಾಳೆ ಒಂದು ವೇಳೆ ಮನುಷ್ಯ ಒಂದೇ ಮಗುವಿನಿಂದಲೇ ನಮಗೆ ತೃಪ್ತಿಯಾಗಲಿ ಮತ್ತು ಉಳಿದಿರುವ ಆಯಸ್ಸನ್ನು ಆ ಮಗುವಿನ ಲಾಲನೆ–ಪೋಷಣೆ–ರಕ್ಷಣೆ–ದರ್ಶನದಲ್ಲಿ ಕಳೆಯಲಿ ಎಂದು ಬೇಡಿಕೊಂಡರೆ ವಿಜ್ಞಾನ ಆ ಬೇಡಿಕೆಯನ್ನು ಪೂರೈಸಲು ಕೂಡ ನೆರವಾಗುವುದು. ವಿಜ್ಞಾನ ಸದಾಕಾಲ ಜಟಿಲ ಸಮಾಜ ವ್ಯವಸ್ಥೆಯೊಂದಿಗೇ ಸೇರಿದೆ ಎಂದೇನಲ್ಲ. ಆತ್ಮಜ್ಞಾನದ ವಿಕಾಸವಾದಂತೆಲ್ಲ ಜೀವನ ಸಾದಾ ಮತ್ತು ಸರಳವಾಗುತ್ತದೆ. ಸರಳ ಜೀವನವೆಂದರೆ ಹಳೆಯ, ಸೌಕರ್ಯಗಳಿಲ್ಲದ ಕಷ್ಟಮಯ ಜೀವನವಲ್ಲ. ಜೀವನದಲ್ಲಿ ಸುಖ – ಅನುಕೂಲತೆಗಳನ್ನು ಖಂಡಿತವಾಗಿ ತೆಗೆದುಕೊಂಡು ಬರಲಿ ಆದರೆ ಅವುಗಳ ಜೊತೆಗೆ ಸರಳತೆಯ ಹೊಂದಾಣಿಕೆಯಾಗಲೀ.

ಈ ದೃಷ್ಟಿಕೋನದಿಂದ ವಿಜ್ಞಾನದೊಂದಿಗೆ ಸತ್ಯಾಗ್ರಹದ ಹೊಂದಾಣಿಕೆ ಮಾಡಿದಾಗ ನನಗೆ ಒಂದು ಹೊಸ ದರ್ಶನ ಹೊಳೆಯುತ್ತದೆ. ವಿಜ್ಞಾನದ ಕ್ಷೇತ್ರದಲ್ಲಿಯೂ ಕೂಡ ಸತ್ಯಾಗ್ರಹದ ಹುಡುಕಾಟ ಮಾಡಬೇಕಿದೆ. ಈ ಮಾತು ನನಗರ್ಥವಾಗುತ್ತದೆ. ಮೊದಲು ಶಸ್ತ್ರಕ್ರಿಯೆ ಮಾಡುವ ಸಮಯದಲ್ಲಿ ಮನುಷ್ಯನಿಗೆ ಕಷ್ಟವಾಗಬಾರದೆಂಬ ಕಾರಣಕ್ಕಾಗಿ ಯಾವುದಾದರೊಂದು ಔಷಧಿಯನ್ನು ಕಂಡು ಹಿಡಿಯುವುದು ವೈದ್ಯಶಾಸ್ತ್ರಕ್ಕೆ ಅಗತ್ಯವಾಗಿತ್ತು. ಇಂಥ ಔಷಧಿ ಇರಲಿಲ್ಲವಾದ್ದರಿಂದ ಶಸ್ತ್ರಕ್ರಿಯೆಮಾಡುವ ಸಮಯದಲ್ಲಿ ಮನುಷ್ಯನನ್ನು ದನದ ಹಾಗೆ ಗಟ್ಟಿಯಾಗಿ ಕಟ್ಟಿಹಾಕುತ್ತಿದ್ದರು. ಆಮೇಲೆ ಶಸ್ತ್ರಕ್ರಿಯೆಮಾಡಲಾಗುತ್ತಿತ್ತು. ಇಂದು ಕ್ಲೋರೊಫಾರಂದ ಸಂಶೋಧನೆಯಾಗಿದೆ. ಶಸ್ತ್ರಕ್ರಿಯೆ ಯಾವುದೇ ಕಷ್ಟವಿಲ್ಲದೆ ಆಗಿಬಿಡುತ್ತದೆ. ಕ್ಲೋರೊಫಾರಂನ ಶೋಧನೆ ಅಹಿಂಸೆಯ ದಿಕ್ಕಿನತ್ತ ನಡೆದ ಶೋಧನೆಯಾಗಿದೆ. ಅದರಿಂದ ಮನುಷ್ಯನ ದುಃಖವನ್ನು ದೂರ ಮಾಡುವ ಒಂದು ಪ್ರಭಾವಿ ಸಾಧನ ಪ್ರಾಪ್ತವಾಗಿದೆ. ಅದೇ ರೀತಿ ಸತ್ಯಾಗ್ರಹದ ಶೋಧನೆಗಾಗಿ ಯಾವ ಸಾಧನಗಳ ಅಗತ್ಯವಿದೆಯೋ ಆ ದಿಕ್ಕಿನತ್ತ ಸ್ವಯಂ ವಿಜ್ಞಾನವೇ ಪ್ರಯತ್ನ ಮಾಡುತ್ತ ಹೋಗುವುದು. ಸರ್ವೋದಯಕ್ಕೆ ವಿಜ್ಞಾನದ ಸಹಾಯ ಬಹಳಷ್ಟು ದೊರೆಯುವುದೆಂದು ನನ್ನ ಅನಿಸಿಕೆ. ಆದ್ದರಿಂದ ವಿಜ್ಞಾನ ನಮ್ಮ ಶಕ್ತಿ. ಪ್ರತಿಪಕ್ಷವಲ್ಲ ಎಂದು ನಾನು ಪದೇ ಪದೇ ಹೇಳತ್ತಿರುತ್ತೇನೆ. ಇಂದು ಯಾರು ಹಿಂಸೆಯ ಪಕ್ಷಪಾತಿಯಾಗಿದ್ದಾರೊ ಅವರೊಂದಿಗೆನೇ ವಿಜ್ಞಾನ ಇದೆ ಎಂಬುದು ನಿಜವಾದರೆ ವಿಜ್ಞಾನದ ಶಕ್ತಿ ನಮ್ಮ ಪರವಾಗಿದೆ. ಅಹಿಂಸೆಯ ಆಶ್ರಯದಲ್ಲಿ ಇದ್ದರೇನೆ ವಿಜ್ಞಾನದ ರಕ್ಷಣೆಯಾಗುವುದು. ಹಿಂಸೆಯ ಆಶ್ರಯದಲ್ಲಿ ವಿಜ್ಞಾನ ಬೆಳೆಯುತ್ತಾ ಹೋದರೆ ಮಾನವನಷ್ಟೇ ಅಲ್ಲ ಸ್ವಯಂ ವಿಜ್ಞಾನವೇ ಅಪಾಯದಲ್ಲಿರುವುದು. ಮಾನವ ಮತ್ತು ವಿಜ್ಞಾನ ಅಪಾಯಗಳಿಂದ ಉಳಿಯಲಿ ಮತ್ತು ವಿಜ್ಞಾನದ ಪ್ರಗತಿ ಅಪ್ರತಿಹತವಾಗಿರಲಿ ಇದೇ ನನ್ನ ಇಚ್ಛೆ ಆದ್ದರಿಂದ ವಿಜ್ಞಾನ ನಮ್ಮ ಪಕ್ಷದಲ್ಲಿದೆ ಎಂದು ನಾನು ಹೇಳುತ್ತೇನೆ. ಇದರಲ್ಲಿ ಯಾವ ಸಂದೇಹ ಬೇಡ.

(ದಿನಾಂಕ: ೧೩/೦೬/೧೯೫೮ ಮಹಾರಾಷ್ಟ್ರ ಯಾತ್ರೆ)

– ಅನುವಾದ ಸು.ಕೌ



ಮನಶಾಸ್ತ್ರ ಮತ್ತು ಗಾಂಧೀ

(ಕಳೆದ ೩೫ವರ್ಷಗಳಿಂದ ಪ್ರಕಟವಾಗುತ್ತಿರುವ ತ್ರೈಮಾಸಿಕ "ಗಾಂಧೀ ಮಾರ್ಗ"ದ ೨೦೧೪ರ ಜನವರಿ – ಮಾರ್ಚ್ ಸಂಚಿಕೆಯನ್ನು ಗಾಂಧೀ ಕೇಂದ್ರಿತ ಅಹಿಂಸೆಯ ಮನಃಶಾಸ್ತ್ರ ಕುರಿತು ವಿಶೇಷ ಸಂಚಿಕೆಯನ್ನಾಗಿ ಹೊರತರಲಾಗಿದೆ. ಶಾಂತಿ ಕುರಿತ ಮನಃಶಾಸ್ತ್ರ ಅಹಿಂಸೆಯ ಮನೋಧರ್ಮವನ್ನು ಬೆಳೆಸುವ ಸಂಬಂಧದ್ದಾಗಿದೆ. ಗಾಂಧೀಯವರ ಅಹಿಂಸೆಯನ್ನು ಪರೀಕ್ಷಿಸಲು ಮನಃಶಾಸ್ತ್ರ ಹೇಗೆ ಉಪಯುಕ್ತ ಎಂಬ ವಿಚಾರಗಳುಳ್ಳ ಹತ್ತಾರ ಲೇಖನಗಳು ವಿಶೇಷ ಸಂಚಿಕೆಯಲ್ಲಿವೆ. ಈ ವಿಶೇಷ ಸಂಚಿಕೆಯ ಸಂಪಾದಕರಾಗಿ ಪ್ರೊ.ವಿನೋದ್ ಕೂಲ್ ಕೆಲಸ ಮಾಡಿದ್ದಾರೆ. ಅವರು ಬರೆದ ಮುನ್ನುಡಿಯನ್ನು ಇಲ್ಲಿ ಪ್ರಸ್ತುತಗೊಳಿಸಲಾಗಿದೆ.)

– ವಿ.ಕೆ.ಕೂಲ್

1983ರಲ್ಲಿ ಪ್ರಕಟವಾದ ರಾಘವನ್ ಅಯ್ಯರ್‌ರವರ "ಮಹಾತ್ಮ ಗಾಂಧೀಯವರ ನೀತಿ ಮತ್ತು ರಾಜ್ಯಶಾಸ್ತ್ರ" ವಿಚಾರ ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ. ಆ ಪುಸ್ತಕವನ್ನು ಓದಿದ ಮೇಲೆ ಗಾಂಧೀಜಿಯವರ ಕ್ರಿಯೆಗಳಲ್ಲಿ ಇರಬಹುದಾದ ಮನಃಶಾಸ್ತ್ರದ ಅಂಶಗಳನ್ನು ಬೆಳಕಿಗೆ ತರುವುದು ಅಗತ್ಯವೆಂದು ನನಗೆ ಸಹಜವಾಗಿ ಅನಿಸಿತು. ಇದು ಅತ್ಯಂತ ಮಹತ್ವದ ವಿಷಯವಾಗಿದ್ದರೂ ನಮ್ಮ ಕಾಲದ ಐತಿಹಾಸಿಕ ಮತ್ತು ರಾಜಕೀಯ ಬೆಳವಣಿಗೆಗಳಲ್ಲಿ ಅಬು ಗಮನಕ್ಕೆ ಬಾರದೆ ಉಳಿದಿದೆ. ಗಾಂಧೀಯವರ ವಿಚಾರ ಮತ್ತು ಆಚಾರದ ಮಧ್ಯದ ಸಂಬಂಧವನ್ನು ಹುಡುಕಬೇಕೆಂದು ಅಯ್ಯರ್‌ರವರು ಅತ್ಯುತ್ಸಾಹಿತರಾಗಿದ್ದರು. ಈ ಅತ್ಯುತ್ಸಾಹವೇ ಗಾಂಧೀಯವರನ್ನು ಕುರಿತು ಸಂಗ್ರಹವಾಗಿ ಹೇಳುವಂತೆ ಮಾಡಿದೆ. ನಿರ್ದಿಷ್ಟವಾದ ನೈತಿಕ ಮೌಲ್ಯಗಳನ್ನು ಸ್ವಪ್ರೇರಣೆಯಿಂದ ಅನುಸರಿಸುವಿಕೆ ಮತ್ತು ನೈತಿಕವಾಗಿ ಉದಾಹರಣೆಯನ್ನು ಪ್ರಸ್ತುತಗೊಳಿಸುವುದರ ಮಧ್ಯೆ ಇರುವ ಸಂಬಂಧ ತಾರ್ಕಿಕವಾದುದಲ್ಲ. ಬದಲಿಗೆ ಮನಃಶಾಸ್ತ್ರೀಯವಾದುದು(ಪುಟ ಸಂಖ್ಯೆ.69) ಈ ಹೇಳಿಕೆ ಮಾನವೀಯ ಮನಃಶಾಸ್ತ್ರವನ್ನು ಅರಿತುಕೊಳ್ಳಲು ಮತ್ತು ಅದಕ್ಕಿಂತಲೂ ಹೆಚ್ಚಾಗಿ ಅಹಿಂಸಾತ್ಮಕ ವ್ಯಕ್ತಿತ್ವವನ್ನು ಅರ್ಥಮಾಡಿಕೊಳ್ಳಲು ಬಹಳ ಮಹತ್ವ ಪಡೆದಿದೆ. ಸಮಾಜದಲ್ಲಿ ಈಗಾಗಲೇ ಇರುವ ನೀತಿ ಸಂಹಿತೆಗಳ ಜೊತೆಗೆ ಆಚರಣೆರೂಪದ ಉದಾಹರಣೆಯನ್ನು ಸಮಾಜದ

ಮುಂದಿಡಬೇಕೆಂಬುದು ಗಾಂಧೀಯವರಿಗೆ ಮಹತ್ವದ ಸಂಗತಿಯಾಗಿತ್ತು. ಹಾಗೆ ಮಾಡುವುದರಿಂದ ವ್ಯಕ್ತಿ ಬೇರೆಯವರೊಂದಿಗೆ ನೈತಿಕ ಮೌಲ್ಯಗಳಲ್ಲಿ ತಾನೂ ಪಾಲುಗಾರನಾಗುವುದಲ್ಲದೆ ಆ ವ್ಯಕ್ತಿ ತನ್ನ ಜೀವನದ ಸೀಮಿತ ವಲಯವನ್ನು ದಾಟಿ ನೋಡಲು ಸಹಾಯಮಾಡುತ್ತದೆ. ಅಯ್ಯರ್‌ರವರು ಹೇಳುವಂತೆ ಅವನು ತನ್ನ ಆತ್ಮ ಪರೀಕ್ಷೆಯನ್ನು ಮುಂದುವರೆಸುತ್ತಾ ಹೋಗುವನು. ಎರಿಕ್‌ಸನ್ ಪ್ರಕಾರ ಗಾಂಧೀ ಒಂದು ಮಹೋನ್ನತ ನೀತಿಶಾಸ್ತ್ರವನ್ನು ನಿರ್ಮಿಸಿದರು. ಅದು ಮಹೋನ್ನತ ನೈತಿಕ ನಡವಳಿಕೆಯೊಂದಿಗೆ ಸಮರಸವಾಗಿ ಬೆರೆತುಕೊಂಡ ಸಾಮಾಜಿಕ ಒಳ್ಳೆಯ ತನದ ಸ್ವರೂಪವಾಗಿ ಹೊರಹೊಮ್ಮುತ್ತದೆ. ಅಂಥ ಪರಿವರ್ತನೆ ಮಾನವ ಮನಸ್ಸಿನ ಪ್ರಬಲ ಶಕ್ತಿಯನ್ನು ಅರ್ಥಮಾಡಿಕೊಳ್ಳದೆ ಸಾಧ್ಯವಾಗುವುದಿಲ್ಲ. ಆಲ್ಬರ್ಟ್ ಐನ್‌ಸ್ಟೀನ್‌ರವರ ಮೇಲೆ ಗಾಂಧೀಯವರ ಕೆಲಸದ ಪ್ರಭಾವ ಎಷ್ಟೊಂದು ಪರಿಣಾಮಕಾರಿಯಾಗಿತ್ತೆಂದರೆ ಅವರು ಈ ರೀತಿ ಬರೆದರು: "ಬರುವ ಜನಾಂಗ ರಕ್ತ ಮಾಂಸ ತುಂಬಿದ ಅಂಥ ಮನುಷ್ಯ ಈ ಭೂಮಿ ಮೇಲೆ ನಡೆದ ಎಂದು ನಂಬುವುದು ಕಷ್ಟ". ಹಾಗಿದ್ದಾಗಿಯೂ "ಟೈಮ್ ಪತ್ರಿಕೆ" ಗಾಂಧೀಯವರ ಬದಲಾಗಿ ಐನ್‌ಸ್ಟೀನರನ್ನೇ 20ನೇ ಶತಮಾನದ ಮಹಾನ್ ವ್ಯಕ್ತಿಯೆಂದು ಆಯ್ಕೆಮಾಡಿತು. ಅವರಿಬ್ಬರ ಮಧ್ಯದ ಮೂಲಭೂತ ವ್ಯತ್ಯಾಸ ಸ್ಪಷ್ಟವಾಗಿದೆ. ಐನ್‌ಸ್ಟೀನರು ಭೌತಶಾಸ್ತ್ರ ಮತ್ತು ಗಣಿತಶಾಸ್ತ್ರದ ಮೂಲಕ ವಿಶ್ವದ ರಹಸ್ಯಗಳನ್ನು ತೋರಿಸಿದರು. ಅದು ನಮ್ಮಿಂದ ಭಿನ್ನವಾದ ಬಾಹ್ಯ ಜಗತ್ತು, ಆದರೆ ಗಾಂಧೀ ನಮಗೆ ಅಹಿಂಸೆಯನ್ನು, ಆತ್ಮಸಂಯಮದ ಮೂಲಕ ಮತ್ತು ಮನಶಾಸ್ತ್ರಾಧಾರಿತ ಸತತ ಆತ್ಮಪರೀಕ್ಷೆ ಮಾಡಿಕೊಳ್ಳುವ ಸ್ವಯಂ ಪ್ರೇರಿತರಾಗಿ ಒಪ್ಪುವುದರ ಮೂಲಕ ನಮ್ಮ ಅಂತಃಶಕ್ತಿಯನ್ನು ಹೇಗೆ ತಿಳಿದುಕೊಳ್ಳಬೇಕೆಂಬುದನ್ನು ಹೇಳಿದರೆಂಬ ಮಾತನ್ನು ಬೇರೆ ಕಡೆ ಎಲ್ಲಿಯೋ ಓದಿದಾಗ ಅದು ನನ್ನ ಮನಸ್ಸನ್ನು ಸೂರೆಗೊಂಡಿತು. ಸಂಕ್ಷಿಪ್ತವಾಗಿ ಹೇಳುವುದಾದರೆ ಗಾಂಧೀಯವರ ತತ್ವಶಾಸ್ತ್ರ ಮತ್ತು ಮಾಡಿದ ಕಾರ್ಯ ಬುದ್ಧಿಕ್ರಿಯಾ ವಿಜ್ಞಾನ ಮತ್ತು ನಡವಳಿಕೆಯ ವಿಜ್ಞಾನಕ್ಕೆ ಅಪಾರವಾದ ಕೊಡುಗೆಯನ್ನು ಸಲ್ಲಿಸುವಂಥದ್ದಾಗಿದೆ.

2013ರ ಫೆಬ್ರವರಿಯಲ್ಲಿ ಕೇರಳ ರಾಜ್ಯದ ಕೊಟ್ಟಾಯಂನಲ್ಲಿರುವ ಮಹಾತ್ಮಾ ಗಾಂಧೀ ವಿಶ್ವವಿದ್ಯಾಲಯಕ್ಕೆ ಭೇಟಿಕೊಟ್ಟ ಸಂದರ್ಭದಲ್ಲಿ ಪ್ರೊ.ಜಾನ್ ಮೂಲಕಟ್ಟುರವರನ್ನು ಭೇಟಿಮಾಡಿದೆ. ಅವರು ಗಾಂಧೀ ಮಾರ್ಗದ ಸಂಪಾದಕರು. ಗಾಂಧೀಯವರ ಮನೋದೃಷ್ಟಿಕೋನಗಳನ್ನು ಕುರಿತಾಗಿಯೇ ಗಾಂಧೀ ಮಾರ್ಗದ ವಿಶೇಷ ಸಂಚಿಕೆಯೊಂದನ್ನು ತರುವುದರ ಅಗತ್ಯದ ಬಗ್ಗೆ ಚರ್ಚಿಸಿದೆ. ಗಾಂಧೀಯವರ ಕೆಲಸದ ಮತ್ತು ತತ್ವಶಾಸ್ತ್ರದ ಪ್ರಭಾವ ಭಾರತದಲ್ಲಿಯಂತೆ ಜಗತ್ತಿನ ಬೇರೆಡೆಯಲ್ಲಿಯೂ ಕಡಿಮೆಯಾಗುತ್ತಿರುವ ಸಂದರ್ಭದಲ್ಲಿ ಪ್ರಪಂಚದಾದ್ಯಂತ ಅಹಿಂಸಾತ್ಮಕ ಚಳುವಳಿಗಳು

ಪುನರುಜ್ಜೀವಿತಗೊಳ್ಳುತ್ತಿವೆ. ಅಹಿಂಸಾತ್ಮಕ ಪ್ರತಿಭಟನೆಗಳು ಜಗತ್ತಿನಲ್ಲಿ ಒಂದು ಬಿಲಿಯನ್‌ಗಿಂತ ಹೆಚ್ಚಾಗಿ ನಡೆದಿವೆ. (2011 ಡಿಸೆಂಬರದ ಟೈಮ್ ಪತ್ರಿಕೆ ಪ್ರಕಾರ) ಜೇನ್ ಶಾರ್ಪ್‌ರಂಥ ಇತಿಹಾಸಕಾರರು ಮತ್ತು ರಾಜ್ಯಶಾಸ್ತ್ರಜ್ಞರು ಗಾಂಧೀ ವಿಚಾರಗಳಲ್ಲಿ ಆಸಕ್ತಿ ತೋರಿಸಲು ಪ್ರಾರಂಭಿಸಿದ್ದಾರೆ. ದುರ್ದೈವ ಏನೆಂದರೆ "ಅರಬ್ ಸ್ಪ್ರಿಂಗ್" ಮತ್ತು ಅಂಥದೇ ಇತರ ಚಳುವಳಿಗಳ ಮನಃಶಾಸ್ತ್ರೀಯ ಸ್ರೋತಗಳನ್ನು ಅರ್ಥ ಮಾಡಿಕೊಂಡು ವಿಶ್ಲೇಷಿಸಿ ಆಧುನಿಕ ಮನೋಶಾಸ್ತ್ರದ ಸಂದರ್ಭದಲ್ಲಿ ಬರೆಯಬಲ್ಲಂಥ ಸಮರ್ಪಿತ ವಿದ್ವಾಂಸರನ್ನು ಕಂಡು ಹಿಡಿಯುವುದು ಸುಲಭವಾಗಿಲ್ಲ.

ಗಾಂಧೀಯವರ ಜೀವನ ಮತ್ತು ಕಾರ್ಯದ ಹಿಂದಿರುವ ಮನಃಶಾಸ್ತ್ರೀಯ ಸಂಗತಿಗಳನ್ನು ಬೆಳಕಿಗೆ ತರುವುದರ ಅಗತ್ಯದ ಬಗ್ಗೆ ದೂರದೃಷ್ಟಿ ಮತ್ತು ನಂಬಿಕೆ ಇದ್ದಂಥ ವಿದ್ವಾಂಸರ ಸಮೂಹದೊಂದಿಗೆ ಸಂಪರ್ಕವನ್ನು ಸಾಧಿಸಲು ಸಮರ್ಥನಾದುದಕ್ಕಾಗಿ ನನ್ನನ್ನು ನಾನು ತುಂಬಾ ಅದೃಷ್ಟವಂತನೆಂದು ಭಾವಿಸುತ್ತೇನೆ. ಅನೇಕ ವಿದ್ವಾಂಸರಿಂದ ಅದ್ಭುತವಾದಂಥ ಲೇಖನಗಳನ್ನು ಪಡೆದಿದ್ದೇನೆ. ಅವರು ಬರೆದು ಕೊಟ್ಟ ಲೇಖನಗಳ ಕಾರಣದಿಂದಾಗಿ ಈ ವಿಶೇಷ ಸಂಪುಟವನ್ನು ಹೊರತರಲು ಸಾಧ್ಯವಾಗಿದೆ. ಅವರಲ್ಲಿ ಕೆಲವರಂತೂ ಲೇಖನಗಳಿಗಾಗಿ ನಿಗದಿಪಡಿಸಲಾಗಿದ್ದ ಸಮಯಕ್ಕನುಸಾರ ಬರೆದುಕೊಡುವುದಕ್ಕಾಗಿ ಬೆಳಗಿನ ಜಾವದವರೆಗೂ ಎಚ್ಚರವಿದ್ದರು. ಅದನ್ನು ನಾನು ಹೇಗೆ ಮರೆಯಲು ಸಾಧ್ಯ. ಅಷ್ಟೊಂದು ತೀವ್ರ ಬದ್ಧತೆ ಅವರಲ್ಲಿತ್ತು. ಅದನ್ನು ನೋಡಿದಾಗ ಗಾಂಧಿಯವರ ಪ್ರತಿಜ್ಞೆ ನೆರವೇರುತ್ತಿದೆ ಎಂಬ ಭಾವನೆ ನನಗೆ ಬಂದಿತು!

ಗಾಂಧೀ ಮಾರ್ಗದ ಈ ವಿಶೇಷ ಸಂಚಿಕೆಗಾಗಿ ನಾನು ನಾಲ್ಕು ವಿಶೇಷ ಅಂಶಗಳನ್ನು ಇಟ್ಟುಕೊಂಡಿದ್ದೆ. ಆ ನಾಲ್ಕು ಅಂಶಗಳು: ಗಾಂಧಿಯನ್ನು ಕೇಂದ್ರವಾಗಿಟ್ಟುಕೊಂಡು ಅಹಿಂಸೆಯ ಮನಃಶಾಸ್ತ್ರದ ಪ್ರತಿಪಾದನೆಯಾಗಬೇಕು. ಮೊದಲನೆಯದು ಮನಃಶಾಸ್ತ್ರದ ವಿವಿಧ ಪ್ರಕಾರದ ಪ್ರಮೇಯಗಳು ಮತ್ತು ಮಾದರಿಗಳಲ್ಲಿ ಗಾಂಧಿಯವರ ಜೀವನ ಮತ್ತು ಕೆಲಸವನ್ನು ಉದಾಹರಿಸಲಾಗಿದೆ ಎಂಬುದನ್ನು ತೋರಿಸುವುದು. ರೀತಾ ಅಗರವಾಲ್ ಜೊತೆಗೆ ನಾನು ಬರೆದಿರುವ ಲೇಖನ ಈ ಉದ್ದೇಶವನ್ನು ನೆರವೇರಿಸುತ್ತದೆ ಹಾಗೂ ವಿವಿಧ ಮನಃಶಾಸ್ತ್ರ ವಿದ್ವಾಂಸರು ಹೇಳಿದ ಮಾತುಗಳನ್ನು ಒಳಗೊಂಡ ಭದ್ರ ತಳಪಾಯವನ್ನು ಒದಗಿಸುತ್ತದೆ. ಅವರಲ್ಲಿ ಮನೋವಿಜ್ಞಾನ ಕ್ಷೇತ್ರದಲ್ಲಿ ಉನ್ನತ ಪಾರಂಗತೆಯನ್ನು ಪಡೆದವರ ಅನುಭವದ ಮಾತುಗಳು ಮತ್ತು ಸಾಮಾನ್ಯ ಹಿನ್ನೆಲೆಯುಳ್ಳವರ ಮಾತುಗಳೂ ಸೇರಿಕೊಂಡಿವೆ.

ಎರಡನೆಯದಾಗಿ ಬಹಳ ಮೆಚ್ಚುಗೆಯನ್ನು ಪಡೆದಿರುವ ಎರಿಕ್‌ಸನ್‌ರವರ "ಗಾಂಧಿಯವರ ಸತ್ಯ" ಎಂಬ ಪುಸ್ತಕದಿಂದ ಸುಳಿವು ಪಡೆದು ಗಾಂಧಿಯವರ

ವ್ಯವಹಾರದಲ್ಲಿ ವ್ಯಕ್ತಿಯ ಅಸ್ಮಿತೆಯ ನಿರ್ಮಾಣದ ಪಾತ್ರವನ್ನು ಕೈಗೆತ್ತಿಕೊಂಡೆ. ಆಗ ಆಧುನಿಕ ಮನೋವಿಜ್ಞಾನಕ್ಕೆ ಗಾಂಧಿಯವರ ಕಾಣಿಕೆ ವಿಶೇಷವಾಗಿ ತೀರ್ಮಾನ ಕೈಗೊಳ್ಳುವಿಕೆ ಮತ್ತು ನೈತಿಕತೆಯ ಮಹೋನ್ನತಿಗೆ ಸಂಬಂಧಿಸಿದ ಹಾಗೆ ಎರಡು ಆಯಾಮಗಳನ್ನು ಕಂಡುಹಿಡಿದೆ. ಮನೋವಿಜ್ಞಾನದಲ್ಲಿ ಸಂಶೋಧನೆಗೆ ಒಳಪಡಬೇಕಾದ ಇನ್ನೊಂದು ಮಹತ್ವದ ಕ್ಷೇತ್ರವೆಂದರೆ ನೈತಿಕತೆಯ ಕ್ಷೇತ್ರ. ಈ ಕ್ಷೇತ್ರದಲ್ಲಿ ಓಪೋಟೋ ಎಂಬುವರು ಕಳೆದ ಎರಡು ದಶಕಗಳಿಗಿಂತ ಹೆಚ್ಚು ಕಾಲದಿಂದ ಸಂಶೋಧನೆ ಮಾಡುತ್ತಿದ್ದಾರೆ. ಗಾಂಧಿಯವರ ನೈತಿಕತೆ ಒಳಗೊಂಡ ನಡತೆಯ ಉದಾಹರಣೆಗಳನ್ನು ಕೊಡುತ್ತಾ ಓಪೋಟೋ, ಎರಿಕ್‌ಸನ್ನರು ಉನ್ನತ ತರ ಅಸ್ಮಿತೆಯ ಬಗೆಗಿನ ಕಲ್ಪನೆಯನ್ನು ಬೇರೆ ರೀತಿಯಲ್ಲಿ ಮತ್ತು ಬಹಳ ಪರಿಣಾಮಕಾರಿಯಾಗಿ ಬೆಂಬಲಿಸಿದ್ದಾರೆ. ಆಕೆಯ ಲೇಖನ ಅಮೂಲ್ಯವಾದ ಮನೋವೈಜ್ಞಾನಿಕ ಚೌಕಟ್ಟನ್ನು ಒದಗಿಸುತ್ತದೆ. ಅದು ಎರಿಕ್‌ಸನ್ನರ ಮನೋವೈಜ್ಞಾನಿಕ ಅಧ್ಯಯನವನ್ನು ಹೊಸತನದ ಮತ್ತು ಉಪಯುಕ್ತಕರ ರೀತಿಗಳಿಂದ ಮುಂದುವರೆಸುವುದರಿಂದ ನನಗೆ ಅದು ತುಂಬ ಆಸಕ್ತಿದಾಯಕವೆನಿಸುತ್ತದೆ.

ಇನ್ನು ಮೂರನೆಯ ಕ್ಷೇತ್ರ ಗಾಂಧಿ ಯಾವ ರೀತಿ ನಮ್ಮ ವ್ಯಕ್ತಿಗತ ಜೀವನದ ಮೇಲೆ ಪ್ರಭಾವ ಬೀರುತ್ತಾರೆ ಎಂಬ ಕ್ಷೇತ್ರದ ಅಧ್ಯಯನ. ಹದಿನೇಳು ಪುಸ್ತಕಗಳ ಕರ್ತೃ ಘನ ವಿದ್ವಾಂಸ ಡೇವಿಡ್ ಕೋಟ್‌ರೈಟ್ ಈ ವಿಷಯದ ಬಗ್ಗೆ ಲೇಖನ ಬರೆಯಲು ಸ್ಪಷ್ಟವಾಗಿ ಅತ್ಯಂತ ಯೋಗ್ಯ ಆಯ್ಕೆ. ಒರ್ವ ಪರಿಣತ ಸೈನಿಕನಾಗಿ ನಂತರ ಒರ್ವ ಶಾಂತಿ ಸೈನಿಕನಾಗಿ ಪರಿವರ್ತಿತಗೊಳ್ಳುವುದು ಅವರಿಗೆ ಸುಲಭಸಾಧ್ಯವಾಗಿರಲಿಲ್ಲ. ಅವರ ಮೇಲೆ ಗಾಂಧಿ ಯಾವ ರೀತಿ ಮೋಡಿಮಾಡಿದರೆನ್ನುವುದನ್ನು ಅವರ ಲೇಖನ ಓದುವುದರಿಂದ ನಿಮಗೆ ಗೊತ್ತಾಗುತ್ತದೆ. ನನಗೆ ಅವರ ಪರಿಚಯ ಕೊಂಚ ಭಿನ್ನ ರೀತಿಯಲ್ಲಿ ಆಯಿತು. ಅವರು ಗಾಂಧಿ ಮಾರ್ಗಕ್ಕೆ ಲೇಖನ ಬರೆಯುವಾಗ ತಮ್ಮ ಲೇಖನದ ಶೀರ್ಷಿಕೆಯಾಗಿ "ಗಾಂಧಿಯೊಂದಿಗೆ ಗುದ್ದಾಟ ಎಂದು ಶೀರ್ಷಿಕೆಯಾಗಿರುವುದೆಂದು ಹೇಳಿದರು" ಅಂತಿಮವಾಗಿ ನನಗೆ ಆ ಲೇಖನವನ್ನು ಕಳುಹಿಸಿದಾಗ ಆ ಲೇಖನದ ಶೀರ್ಷಿಕೆ "ನನ್ನ ಗಾಂಧಿ" ಎಂದಾಗಿತ್ತು. ಅವರಲ್ಲಿ ಈ ನವಿರು ಬದಲಾವಣೆಯನ್ನು ನಾನು ಗಮನಿಸಿದೆ. ರಿಚರ್ಡ್ ಗ್ರೆಗ್‌ಎವೆಲು 1925–30ರಲ್ಲಿ ಗಾಂಧಿಯವರೊಂದಿಗೆ ಮಾಡಿದ ಒಡನಾಟವನ್ನು ಉದಾಹರಿಸುತ್ತಾ ಕೋಟ್‌ರೈಟ್‌ರವರ ಲೇಖನ ಹೇಗೆ ಗಾಂಧಿಯವರ ಜೀವನ ಪದ್ಧತಿ ಎಂಥ ಕಠಿಣ ಸನ್ನಿವೇಶದಲ್ಲೂ ಜಯ ಹೊಂದುವಂಥ ಪರಿಸ್ಥಿತಿಯನ್ನು ಉಂಟುಮಾಡುತ್ತದೆಂಬುದನ್ನು ತೋರಿಸುತ್ತದೆ. ಶೆರೋನ್, ಲೌರಿಘಿಲ್ಲ ಕೂಡ ಗಾಂಧಿಯವರ ಜೀವನ ಪದ್ಧತಿ ಹೇಗೆ ನಮಗೆ ಗೆಲುವಿನ ಪರಿಸ್ಥಿತಿಯನ್ನು

ನಿರ್ಮಿಸಿಕೊಡುತ್ತದೆಂಬುದನ್ನು ಪರಿಶೋಧಿಸಿರುವುದು ನಮಗೆ ಮಹತ್ವದ ವಿಷಯವಾಗುತ್ತದೆ. ಅವರ ವೆಬ್‌ಸೈಟನ್ನು ನೋಡುವುದರ ಮೂಲಕ ಕರ್ತೃತ್ವದಲ್ಲಿ ತೊಡಗಿದ ವ್ಯಕ್ತಿಯನ್ನು ನೋಡುವುದು ಉತ್ತಮ ಕೆಲಸ.

ನಾಲ್ಕನೆಯ ಅಂಶ ಕ್ಷಮೆ, ದಯೆ, ಆತ್ಮ ಸಂಯಮ, ಬುದ್ಧಿಮತ್ತೆ ಕ್ಷೇತ್ರದಲ್ಲಿಯ ಇತ್ತೀಚೆಗಿನ ಮನೋವೈಜ್ಞಾನಿಕ ಶೋಧನೆಗೆ ಸಂಬಂಧಿಸಿದ್ದಾಗಿದೆ. ಜೊತೆಗೆ ಸಮಾನಾಂತರ ನರಶಾಸ್ತ್ರ ಸಂಶೋಧನೆಗೂ ಸಂಬಂಧಿಸಿದ್ದಾಗಿದೆ. ಇದು ಅಹಿಂಸಾ ಮನೋವಿಜ್ಞಾನದ ತಳಹದಿಯನ್ನು ಹಾಕಲು ಪ್ರಮುಖ ಪಾತ್ರವನ್ನು ವಹಿಸಿದೆ. ಕ್ಷಮೆಯನ್ನು ಸಮರಸತೆಯನ್ನುಂಟುಮಾಡುವ ಸಾಧನವೆಂದು ಭಾವಿಸುತ್ತಾ ಬರೆದ ಪಲೌಡ್ಜಿಯನ್ ಮತ್ತು ಸಹ ಕಾರ್ಯಕರ್ತರ ಲೇಖನವು ಗಾಂಧಿ ಒಂದು ಉದಾಹರಣೆಯೆಂದು ಪರಿಶೀಲಿಸುತ್ತದೆ. ಪಲೌಡ್ಜಿಯನ್ ಅಮೇರಿಕಾದ ಮನೋವಿಜ್ಞಾನ ಸಂಘದ ಧಾರ್ಮಿಕ ಮನೋವಿಭಾಗದ ಘಟಕದ ಅಧ್ಯಕ್ಷರಾಗಿ ಕೆಲಸಮಾಡಿದ್ದಾರೆ. ತಮ್ಮ ಅನೇಕ ಪುಸ್ತಕಗಳಿಂದಾಗಿ ಪ್ರಸಿದ್ಧಿ ಹೊಂದಿದ್ದಾರೆ. ಗಾಂಧಿಯವರ ಬಗ್ಗೆ ಬರೆಯುವುದೆಂದರೆ ಒಂದು ದೊಡ್ಡ ಆಹ್ವಾನ ಅಥವಾ ಸವಾಲೆಂದು ನನಗೆ ಹೇಳಿದರು.


ಪ್ರೊ.ರೀತಾ ಅಗರ್‌ವಾಲ್‌ರ ಸಹಾಯವನ್ನು ನೆನೆಯಲೇಬೇಕು. ಆಕೆಯ ಅಮೂಲ್ಯ ಮತ್ತು ರಚನಾತ್ಮಕ ಟಿಪ್ಪಣಿಗಳು ಇಲ್ಲದೇ ಹೋಗಿದ್ದರೆ ಈ ಸಂಪುಟವನ್ನು ತರುವುದು ಸಾಧ್ಯವಾಗುತ್ತಿರಲಿಲ್ಲ. ಮನೋವಿಜ್ಞಾನಿಗಳಾದ ನಾವು ಪ್ರೊ.ಜಾನ್ ಮೂಲಕಟ್ಟುರವರು ಈ ವಿಶೇಷ ಸಂಚಿಕೆಯನ್ನು ಹೊರತರುವಾಗ ಎಲ್ಲ ಹಂತಗಳಲ್ಲಿ ಬೆಂಬಲಿಸಿದ್ದನ್ನು ನಾನು ಬಹುವಾಗಿ ಅಭಿನಂದಿಸುತ್ತೇನೆ. ಅಲ್ಲದೆ ಗಾಂಧಿಯವರ ಕಾರ್ಯ ಮತ್ತು ತತ್ವಶಾಸ್ತ್ರಗಳು ಹೇಗೆ ಮನೋವಿಜ್ಞಾನದ ಕ್ಷೇತ್ರಕ್ಕೆ ಮಹತ್ತರವಾಗಿವೆ ಎಂಬುದನ್ನು ತೋರಿಸಲು ಅವಕಾಶಮಾಡಿಕೊಟ್ಟದ್ದಕ್ಕಾಗಿಯೂ ಪ್ರೊ.ಮೂಲಕಟ್ಟುರವರಿಗೆ ವಂದನೆಗಳು.

– ಅನು: ಸುಕೌ

(ಗಾಂಧಿ ಮಾರ್ಗ ಸಾಭಾರ)



ಹೆಚ್.ಎಸ್.ವೆಂಕಟೇಶ ಮೂರ್ತಿಯವರ ಕಾವ್ಯದಲ್ಲಿ



ಗಾಂಧಿ ವಿಚಾರ

ಪ್ರೊ.ಡಿ.ರಘುನಾಥರಾವ್

ಎಚ್ಚೆಸ್ವಿಯವರ ಕವಿತೆಗಳು ಹಲವು ದಿಕ್ಕುಗಳಿಂದ ಪ್ರೇರಣೆ ಪಡೆದಿದ್ದರೂ ಗಾಂಧಿಯ ತಿಳಿವಳಿಕೆ, ಕ್ರಿಯೆ ವಿಚಾರಗಳು ಅವುಗಳಲ್ಲಿ ಮುಖ್ಯವಾಗಿದೆ. ಸದ್ಯದ ನಮ್ಮ ಸಮಾಜದ–ಸಂಸ್ಕೃತಿಯ ಬಿಕ್ಕಟ್ಟು–ಸಮಸ್ಯೆಗಳಿಗೆ ಅವರು ಉತ್ತರವನ್ನು ಗಾಂಧಿಯಲ್ಲಿ ಕಂಡುಕೊಳ್ಳಲು ಪ್ರಯತ್ನಿಸಿರುವಂತಿದೆ. ಗಾಂಧಿ ನೇರವಾಗಿಯೋ ಅಥವಾ ಅವರ ವಿಚಾರ, ಗ್ರಹಿಕೆಗಳ ಮೂಲಕವೋ ಅವರ ಕವಿತೆಗಳ ಒಳಸೇರಿದ್ದಾರೆ. ಗಾಂಧಿಯ ಕಾಯಕದ ಮೇಲಿನ ಒತ್ತು, ಎಲ್ಲ ಚಾಕರಿ ಶ್ರಮಗಳಿಗೆ ಅವುಗಳದೇ ಆದ ಘನತೆಯಿದೆ ಎಂಬ ಅವರ ತಿಳಿವಳಿಕೆ, ಮತ–ಧರ್ಮಗಳ ಸಂಕುಚಿತ, ಜಡ, ಬದಲಾಗಲು ಸಿದ್ಧವಿಲ್ಲದ ನಂಬಿಕೆಗಳ ಕುರಿತ ವಿಮರ್ಶೆ, ಕೋಮು–ಧಾರ್ಮಿಕ ಸಾಮರಸ್ಯಕ್ಕಾಗಿ ಅವರ ತುಡಿತ, ಭಕ್ತಿ, ವಿಶೇಷವಾಗಿ ರಾಮನ ಬಗೆಗಿನ ಅವರ ಗಾಢ ಒಲವು, ಅಸಹಾಯಕ, ಬಡವರ, ಅಸ್ಪೃಶ್ಯರ ಕುರಿತ ಅವರ ಕಾಳಜಿ, ಹಿಂದೂ–ಮುಸ್ಲಿಂ ಐಕ್ಯತೆಯ ಬಗೆಗಿನ ಅವರ ಕಾಳಜಿ– ಇತ್ಯಾದಿಗಳು ಎಚ್ಚೆಸ್ವಿ ಅವರ ಕೆಲವು ಕವಿತೆಗಳನ್ನು ರೂಪಿಸಿವೆ. ಆಪ್ತಗೀತೆಯಂಥ ಉತ್ತಮ ಕವಿತೆಯಲ್ಲಿ ಅದು ಪ್ರಚ್ಛನ್ನವಾಗಿ ಬಂದಿದೆ. ಆದರೆ ಆ ವಿಚಾರಗಳು ನೇರವಾಗಿ ಹೇಳುವಂತಾಗದೆ ಬದುಕನ್ನು ತಿಳಿಯಲು, ಬೆಲೆಯುಳ್ಳದ್ದನ್ನು ಹುಡುಕಿಕೊಳ್ಳಲು, ಶೋಧಿಸಿಕೊಳ್ಳಲು ಅವು ಅವಕಾಶ ಒದಗಿಸಿದೆಯೆನ್ನಿಸುತ್ತದೆ.

ಈ ದೃಷ್ಟಿಯಿಂದ ಅವರ, ಹರಿಗೋಲು(1985) ಕವಿತೆಯನ್ನು ನೋಡ. ಹುದು. ಆ ದೀರ್ಘ ಕವಿತೆಯಲ್ಲಿ ಅಲ್ಲಲ್ಲಿ ಗಾಂಧಿ ಇಣುಕುತ್ತಿರುತ್ತಾರೆ. ದೇಶ ದಗ್ಧಗಜ್ವಲಿಸಿ ಬಿಡುಗಡೆಗಾಗಿ ರಾಣಾರಕ್ತವಾದುದನ್ನು ಕವಿತೆ ಹೇಳಿದೆ. ದೇಶ, ಜ್ವಲನ, ಬಿಡುಗಡೆ, ರಾಣಾರಕ್ತ – ಇತ್ಯಾದಿಗಳು ದೇಶದ ಬಿಡುಗಡೆಗಾಗಿ ಗಾಂಧೀಜಿ ನಡೆಸಿದ ಹೋರಾಟವನ್ನು ಸೂಚಿಸುತ್ತವಲ್ಲವೇ? ಹಾಗೇ, ಹೊರಗಿನ ಗುಂಡಿತ ಸಿಡಿತ ಮತ್ತು ಒಳಮನೆಯಲ್ಲಿ ಚೂರಿಯ ಇರಿತ ಎಂಬುವು ಹೋರಾಟಗಾರರನ್ನು ನಿಷ್ಕರುಣೆಯಿಂದ ಬ್ರಿಟಿಷರು ಬಗ್ಗುಬಡೆದುದನ್ನು; ಒಳಗಿನ ಯಾದವೀ ಕಲಹದ ಚೂರಿಯ ಇರಿತವನ್ನು ತಿಳಿಸುವುದರ ಮೂಲಕ ಗಾಂಧಿಯನ್ನು ನೆನಪಿಸುವಂತಿವೆ. ಬಿಡುಗಡೆಯ ಹೋರಾಟಕ್ಕೆ ಊರಬಿಟ್ಟವರು ಹಿಂತಿರುಗಿಬರುವುದು, ಅವರಿಗೆ ಸಿಗುವ ಆತ್ಮೀಯ ಸ್ವಾಗತ, ತೊಟ್ಟು ಖಾದಿಯ ಜುಬ್ಬ ಟೋಪಿಯನ್ನಿಟ್ಟು ನೆತ್ತಿಯ ಮೇಲೆ ಎದೆ ಸೆಟಸಿ ಅವರು ಬರುವುದು, ಬೆಳಗಾಗೆದ್ದು ಸ್ನಾನ ಮಾಡಿ ಮಡಿಮಾಡಿದ ಬಟ್ಟೆ ತೊಡುವುದು, ಶಾಲೆಗೆ ಮಕ್ಕಳನ್ನು ಕಳುಹಿಸಲು

ಒತ್ತಾಯಿಸುವುದು, ವರ್ತಮಾನ ಪತ್ರಿಕೆಯ ನಿತ್ಯವಾಚನ, ಸಂಘಸ್ಥಾಪನೆ, ಖಾದಿ ಬಟ್ಟೆ ತೊಡುವುದು, ಚರಕದಿಂದ ನೂಲುವುದು ಇತ್ಯಾದಿಗಳು ಸಮಾಜದಲ್ಲಿ ಬಂದ ಬದಲಾವಣೆಯನ್ನು ಸೂಚಿಸುವುದರ ಮೂಲಕ ಸಮಾಜದಲ್ಲಿ ಉಂಟಾಗಲಾರಂಭಿಸಿದ್ದ ಸಂಕಲನಕ್ಕೆ ಸೂಚಿಗಳಾಗಿವೆ. ಪುಟ್ಟ ಕಬ್ಬಳ್ಳಿ ಪಡೆಯಲಾರಂಭಿಸಿದ ಹೊಸ ಆಯಾಮಗಳನ್ನು ಸ್ಥೂಲವಾಗಿಯಾದರೂ ಅಲ್ಲಿ ಗಮನಿಸಿರುವುದು ಮುಖ್ಯವಾಗಿದೆ. ಇವೆಲ್ಲಾ ಗಾಂಧೀಜಿಯ ಪ್ರಭಾವದಿಂದ ಆದಂಥವು. ಹಾಗೆಯೇ, ಆದರ್ಶದ ಬೆನ್ನು ಬಿದ್ದವರು ತಮ್ಮ ಅನೂಚಾನ ಬದುಕಿಗೆ ಅನ್ಯರಾಗಿ ಹೊರೆಯಾಗುವಂತಾಗುವುದು, ಅವರ ಚಟುವಟಿಕೆಗಳು ಹೊಟ್ಟೆಯನ್ನು ತುಂಬಿಸದಿರುವುದು, ಭಜನೆ ಮುಗಿಯುವ ಹೊತ್ತಿಗೆ ಬಂದು ಚರಪು ತಿಂದು ಜಾಗ ಖಾಲಿ ಮಾಡುವುದು ಇತ್ಯಾದಿಗಳು ಬರಿ ಆವೇಶ, ಆದರ್ಶಗಳು ಪ್ರಯೋಜನಕ್ಕೆ ಬರುವುದಿಲ್ಲವೆಂಬುದನ್ನು ಕವಿತೆ ಗಮನಿಸಿದೆ. ಆದರ್ಶ–ವಾಸ್ತವಗಳ ನಡುವಿನ ಬಿರುಕನ್ನು ಅದು ಗಟ್ಟಿಯಾಗಿ ಬರದಿದ್ದರೂ ಈ ನೀಳ್ಗವನ ಗಮನಿಸುತ್ತಿರುವುದು ಎಚ್ಚೆಸ್ವಿ ಅವರ ನೋಟಕ್ಕೆ ಸಾಕ್ಷಿ.

ಗಾಂಧಿ ಮತ್ತು ಅವರ ಹೋರಾಟ ತಂದ ಬದಲಾವಣೆಗಳಿಗೆ ಹೊಸ ಚಿಂತನೆ/ಗ್ರಹಿಕೆಗಳ ಪ್ರೇರಣೆ ಯಿದೆ. ಈ ಪರಿವರ್ತನೆ, ಗಾಂಧೀಜಿಯ ಆಶಯಗಳಿಗೆ ಪೂರ್ಣಬದ್ಧವಾಗಿರದಿದ್ದರೂ, ಸಾಮಾಜಿಕ/ಸಾಂಸ್ಕೃತಿಕ ಸಂಚಲನಕ್ಕೆ ಕಾರಣವಾಗಿರುವುದನ್ನು ಒಳಗೊಳ್ಳುವಂತಾಗಿದ್ದರೆ ಇನ್ನಷ್ಟು ಗಾಢವಾಗುತ್ತಿತ್ತೆನಿಸುತ್ತದೆ. ತಂತಿಯನ್ನು ಕಡಿಯುವುದು, ಟಪ್ಪಾಲು ಅಪಹರಿಸುವುದು, ಟ್ರೆಷರಿಗಳನ್ನು ದೋಚುವುದು ಇತ್ಯಾದಿಗಳು ಅವರ ಧೈರ್ಯ, ಕೆಚ್ಚು ಇತ್ಯಾದಿಗಳ ಸೂಚಕಗಳಾಗಿದ್ದರೂ ಗಾಂಧಿ ಆ ರೀತಿಯವರಲ್ಲ. ಆದರೆ, ಈ ಪಲ್ಲಟ ಜನರ ಆಳದ ಕ್ರೂರತೆಯನ್ನು ತೋರಿಸಲಾರಂಭಿಸಿರುವುದನ್ನು ಗಮನಿಸಿರುವುದನ್ನು ಲಕ್ಷಿಸಬೇಕಾಗುತ್ತದೆ. ನೇರ ಗಾಂಧೀಜಿಯ ಪ್ರಭಾವವಿರುವ ಗಾಂಧಿ ಮತ್ತು ನಿರಾವರಣ, ಒಂದಕ್ಕೆ ಒಂದು ಸೇರಿದರೆದಂಥವೂ ಇವೆ. ಗಾಂಧೀಜಿಯನ್ನು ವಿಮರ್ಶಾತ್ಮಕವಾಗಿ ಒಳಗೊಳ್ಳುವ ಪ್ರಯತ್ನ ಅಲ್ಲಿ ಮುಖ್ಯವಾಗದಿರುವ ಹಿನ್ನೆಲೆಯಲ್ಲಿ ಎಚ್ಚೆಸ್ವಿ ಅವರ ಆಪ್ತಗೀತೆ ನೇರ ಮತ್ತು ಸೂಚ್ಯವಾಗಿ ಬದುಕನ್ನು ಬಿಡಿಸಿ ನೋಡಿಕೊಳ್ಳಲು ಮತ್ತು ಶೋಧಿಸಿಕೊಳ್ಳಲು ಗಾಂಧೀಜಿಯ ಜೀವನ–ವಿಚಾರಗಳು ಒದಗಿಬಂದು ಕವಿತೆ ಒಂದು ಅಪರೂಪದ ಸಿದ್ಧಿಯನ್ನು ಪಡೆಯುವಂತಾಗಿದೆ.

ಬದುಕಿನ ಹಲವು ಮುಖಗಳನ್ನು ಒಂದು ವ್ಯಕ್ತಿತ್ವ ಸಂಶ್ಲೇಷಿಸಿಕೊಂಡಾಗ ಬದುಕು ಸಫಲ ಬದುಕಾಗುತ್ತದೆಂಬುದು ಆ ಕವಿತೆಯ ಆಶಯ. ಒಂದು ಸಿದ್ಧಾಂತ, ಒಂದು ಮಾದರಿಯ ಮೂಲಕ ಬದುಕನ್ನು ಸಮಗ್ರವಾಗಿ ಗ್ರಹಿಸಲು ಆಗುವುದಿಲ್ಲ. ಹಲವು ಆಯಾಮಗಳು ಒಂದಾಗಿ ಬದುಕಿನ ಸಂಕೀರ್ಣ ತಿಳಿವಳಿಕೆಗೆ ಕಾರಣವಾಗಬೇಕು. ಗಾಂಧಿಯದು ಅಂಥ ಅಪರೂಪದ ಬದುಕೆಂಬುದನ್ನು ಕವಿತೆ ಧ್ವನಿಸುತ್ತಿರುವಂತಿದೆ. ಹಾಗೆಯೇ, ಕೃಷ್ಣನ ಬದುಕು ಕೂಡ ಇಂಥಾ ಸಂಶ್ಲೇಷಿತ ಬದುಕು ಎಂಬುದು ಕವಿತೆಯ ಆಶಯ. ಯಾದವ, ಕಾದವ, ಹೋರಾಟಗಾರ, ಶ್ರಾವಕ, ಸೇವಕ – ಈ ಎಲ್ಲಾ

ಆಯಾಮಗಳು ಬೇರೆ ಬೇರೆಯಾಗದೆ ಕೃಷ್ಣನಲ್ಲಿ ಒಡಬೆರೆತಿವೆ ಎಂಬುದು ಕವಿತೆಯ ವಿಚಾರ. ಲೋಕದ-ಲೌಕಿಕ ಬದುಕಿನಲ್ಲಿ ತೊಡಗಿಯೂ - ಅದು ಅನಪೇಕ್ಷಣೀಯವಾದುದಲ್ಲವೆಂಬುದನ್ನು ತಿಳಿಸುತ್ತಲೇ ಒಂದು ನಿರ್ಲಿಪ್ತತೆಯನ್ನು ಪಡೆಯುವ ಕವಿತೆಯ ತವಕದ ಹಿಂದೆ ಗಾಂಧಿ ಇದ್ದಾರೆನ್ನಿಸುತ್ತದೆ. ಧ್ಯಾನ, ಪ್ರಾರ್ಥನೆ, ಕರ್ಮಯೋಗ, ಆಧ್ಯಾತ್ಮಿಕತೆ, ಭಾವನಾತ್ಮಕತೆ - ವೈಚಾರಿಕತೆಯ ಸಹಯೋಗ, ಅಂತರಂಗ ನಿರೀಕ್ಷೆ ಮಾಡಿಕೊಂಡು ಏಕಾಂತದಲ್ಲಿ ಧ್ಯಾನಿಸುವುದು ಇತ್ಯಾದಿ ವಿವರಗಳು ಗಾಂಧೀಜಿಯ ಬದುಕಿನ - ತಿಳಿವಳಿಕೆಯ ಧನಾತ್ಮಕತೆಯನ್ನು ಸೂಚಿಸುತ್ತಿವೆ. ಕೃಷ್ಣನ ಬದುಕು ಗಾಂಧಿಯನ್ನು, ಗಾಂಧಿಯ ಬದುಕು ಕೃಷ್ಣನನ್ನು ತಿಳಿಯಲು ಮತ್ತು ಅವುಗಳ ಮುಖಾಮುಖಿಯಲ್ಲಿ ಹೊಸ ತಿಳಿವಳಿಕೆಯನ್ನು ಪಡೆಯುವ ಪ್ರಕ್ರಿಯೆ ಕವಿತೆಗೊಂದು ವಿಶಿಷ್ಟತೆಯನ್ನು ದಕ್ಕಿಸಿಕೊಡುತ್ತಿರುವುದರ ಮೂಲಕ ಅದು ಅವರ/ಕನ್ನಡದ ಒಂದು ಮುಖ್ಯ ಕವಿತೆಯಾಗಿದೆ. ಕವಿಯ ಹುಟ್ಟೂರಿನ ಆಸುಪಾಸಿನ ರೈತರ ಮನೆಯ ವಾತಾವರಣ, ಸಂಸ್ಕೃತಿ ಮತ್ತು ಆ ಪ್ರದೇಶದ ಕೃಷಿಕರ ಬದುಕಿನ ಜತೆ ಅನಿವಾರ್ಯವಾಗಿರುವ ಕೊಟ್ಟಿಗೆ, ಗೋದಲೆ, ಗುಡಿಸುವುದಲ್ಲಬಾಚುವುದು, ಚಿಪ್ಪಲ್ಲಿ ಮೊಗೆಯುವುದು, ಗ್ವಾತ, ಮೆದೆ, ಗಿಮಟು - ಈ ಪದಗಳು ಕರ್ನಾಟಕದ ಇತರೆಡೆಗಳಲ್ಲಿ ಬಳಕೆಯಲ್ಲಿರಬಹುದು - ಇವೆ, ಇತ್ಯಾದಿ ಪದಗಳು ಆ ಪ್ರದೇಶದ ರೈತಾಪಿ ಸಂಸ್ಕೃತಿಯ ಘಮಲಿನವಾಗಿವೆ.(ಗೋಪಾಲನೆಯಲ್ಲ - ದನಗಳ ಚಾಕರಿ ಎಂಬುದೂ ಇದನ್ನೇ ಹೇಳುತ್ತದೆ.) ಕವನವನ್ನು ವಿವರವಾಗಿ ಗಮನಿಸಲು ಇಲ್ಲಿ ಅವಕಾಶವಿಲ್ಲದಿದ್ದರೂ ಸಂಕ್ಷಿಪ್ತವಾಗಿಯಾದರೂ ಗಮನಿಸುವಷ್ಟಕ್ಕೆ ಸಮಾಧಾನಪಟ್ಟುಕೊಳ್ಳಬೇಕಾಗಿದೆ.

ಪುರಾಣದ ಕೃಷ್ಣ, ನಮ್ಮ ಕಾಲದ ಗಾಂಧಿ, ಕರ್ನಾಟಕದ ರೈತರ ಬದುಕು - ಒಂದಕ್ಕೊಂದು ತೆಕ್ಕೆಮುಕ್ಕೆ ಬಿದ್ದು ಆಧುನಿಕ ಕಾಲಕ್ಕೆ ಬೇಕಾಗಬಹುದಾದ ಗೀತೆಯೊಂದನ್ನ ಸೃಷ್ಟಿಸಿವೆ. ಕವಿತೆ ತನ್ನ ಒಳಗನ್ನು ಐದು ಹಂತಗಳಲ್ಲಿ ತೋರಿಸುವ ಪ್ರಯತ್ನದಲ್ಲಿದೆ. ಹಳ್ಳಿಗಾಡಿನ ದನಗಾಹಿಯೊಬ್ಬ, ಬೆಳಗಾತ ಎದ್ದು ಮಾಡುವ ಚಾಕರಿ ಮತ್ತು ನಂತರ ದನಗಳನ್ನು ಮಟ್ಟಿಗೆ ಹೊಡೆದುಕೊಂಡು ಹೋಗುವುದು, ಕಟ್ಟಿಕೊಂಡು ಹೋದ ತಂಗಳು ರೊಟ್ಟಿಯನ್ನು ಬೆಣ್ಣೆ ಸಮೇತ ತಿನ್ನುವುದು, ಈ ಕೆಲಸಗಳನ್ನು ಅಸಹ್ಯ ಪಡದೆ ನಿರ್ವ್ಯಾಜದಿಂದ ಮಾಡುವುದು, ಕೆಲಸದಲ್ಲಿ ತನ್ಮಯವಾಗಿ ಬಿಡುವುದು, ಬಿಡುವು ದೊರೆತು ಅವಕಾಶವಿದ್ದರೆ ಮಾತ್ರ ಕೊಳಲು ನುಡಿಸುವುದು - ಇತ್ಯಾದಿಗಳು ಸಂಗೀತ/ಕೊಳಲು/ಕಲೆ ಇತ್ಯಾದಿಗಳಿಂದ ಜೀವಪರ ಸೇವೆ ಮುಖ್ಯವೆಂಬುದು ಕವಿತೆಯ ಆಶಯ. ಯಾವ ಕೆಲಸವೂ ಹೀನವಾದುದಲ್ಲ ಮತ್ತು ಎಲ್ಲ ಕೆಲಸಗಳಿಗೂ ಘನತೆಯಿದೆ ಎಂಬುದನ್ನು ಕವಿತೆ ಹೇಳುತ್ತದೆ. ಇಲ್ಲೂ, ಗಾಂಧೀಜಿಯ ಬದುಕನ್ನು, ಚಿಂತನೆಯನ್ನು ಸೂಚಿಸುತ್ತಿರುವಂತಿದೆ. ಕೇವಲ ಗೋಪಾಲಕನಾದರೆ, ಕೇಡನ್ನು, ಅಸುರೀಶಕ್ತಿಗಳನ್ನು ಎದುರಿಸಲು, ಬಗ್ಗುಬಡಿಯಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಅದಕ್ಕೆ ಸಾಕಷ್ಟು ತಯಾರಿ ನಡೆಸಬೇಕಾಗುತ್ತದೆ. ದುಷ್ಟತೆಯನ್ನು ಎದುರಿಸಲು ಕೇವಲ ಬುದ್ಧಿಶಕ್ತಿ, ಉದಾತ್ತಭಾವನೆಗಳು, ಚಿಂತನೆಗಳು


ಸಾಕಾಗುವುದಿಲ್ಲ. ದುಷ್ಟರ-ವಾಸ್ತವದ ಸರಿಯಾದ ತಿಳಿವಳಿಕೆ, ಸಾಮಾನ್ಯರ ಇತಿಮಿತಿಗಳ ಜತೆಜತೆಗೇ, ತಂತ್ರ-ಪ್ರತಿತಂತ್ರ ರಚನಾಶಕ್ತಿ, ದೈಹಿಕ ಬಲದ ಅಗತ್ಯವನ್ನು ಕೃಷ್ಣ ಅರ್ಜುನನಿಗೆ ಹೇಳುತ್ತಿದ್ದರೂ ಅದು ವರ್ತಮಾನದ ಗಾಂಧೀಜಿಯ ಹೋರಾಟದ ಸ್ವರೂಪವನ್ನು ಹೇಳುತ್ತಿರುವಂತಿದೆ. ಅಂದರೆ, ಮಕ್ಕಳನ್ನು ಕೊಲ್ಲಲು ಹೇಸದಂಥ-ಕಂಸನಂಥ ನಿಷ್ಕರುಣಿ-ಹಿಂಸಕರನ್ನು ಬಗ್ಗುಬಡಿಯಲು ಕಸರತ್ತು, ಮಟ್ಟಿಸಾಮು ಮಾಡಿ ದೈಹಿಕ ಶಕ್ತಿಯನ್ನು ಪಡೆದಿರಬೇಕಾಗುತ್ತದೆಂಬುದನ್ನು; ಕೆಡುಕು ಹೇಗೆ ಬಂದು ಅಪ್ಪಳಿಸುತ್ತದೆಂಬುದನ್ನು ಊಹಿಸಲು ಸಾಧ್ಯವಿಲ್ಲದಿರುವುದರಿಂದ ಅದನ್ನು ಎದುರಿಸಲು ಹೋರಾಟಗಾರ ಸದಾ ಸನ್ನದ್ಧವಾಗಿರಬೇಕಾಗಿರುತ್ತದೆಂಬುದನ್ನು ಕವಿತೆ ಹೇಳುತ್ತದೆ. ಕೃಷ್ಣ ಕಾದುತ್ತಲೇ ಹೋರಾಟಗಾರನಾಗಲು ಸಾಧ್ಯ ಎಂಬುದು ಕೇವಲ ಆಕಾಂಕ್ಷೆ ಮಾತ್ರವಲ್ಲ, ಎಲ್ಲ ಕಾಲಕ್ಕೂ ಸಲ್ಲುವಂಥದಾಗುತ್ತದೆ. ಬರಿ ಹಾಡಿ ಕುಣಿದರೆ ಮುಗಿಯಲಿಲ್ಲ, ಕಾದಾಡಬೇಕು... ಹಾಗೆ, ಕಾದಿಯೇ ನಾನು ಕಾದವನಾದದ್ದು ಎಂದು ಕೃಷ್ಣ ಹೇಳುತ್ತಾನೆ.

ಮೂರು ನಾಲ್ಕನೆಯ ಭಾಗಗಳು ನೇರವಾಗಿ ಗಾಂಧಿಯ ಬದುಕಿನ ಕೆಲವು ಮುಖ್ಯ ಅಂಶಗಳನ್ನು ಪ್ರಸ್ತಾಪಿಸುತ್ತವೆ. ಜೀವನದಲ್ಲಿ ಅತ್ಯುತ್ಸಾಹ - ಆಸಕ್ತಿಯಿಂದ ತೊಡಗಿಕೊಂಡು ಬದುಕಿನ ಸವಿ-ಸುಖಗಳನ್ನು ಸವಿಯುತ್ತಾ ರಾಗದ ಬದುಕಿನಲ್ಲಿ ಮುಳುಗಿಯೂ, ಅಂತರಂಗದಲ್ಲಿ ಕಾಣದ್ದನ್ನು ಕಾಣಲಿಕ್ಕೆ, ಕೇಳದ್ದನ್ನು ಕೇಳಲಿಕ್ಕೆ, ಮೈಯೆಲ್ಲ ಕಿವಿಯಾಗಿ ಕಾದದ್ದುಂಟು ಎಂದು ಹೇಳುತ್ತಾನೆ. ಧ್ಯಾನಿಸಿದ್ದುಂಟು ಆಗುವುದು ಹೇಗೆಂದು ಕೈಯಿಲ್ಲದವರ ಕೈ;/ ಬಟ್ಟೆಗೆಟ್ಟವರ ಬಟ್ಟೆ; ಮೃತ್ಯುಪೀಡಿತರನ್ನೆತ್ತುವ/... ಇತ್ಯಾದಿ ಆಶಯಗಳು ಗಾಂಧಿಯನ್ನು ನೆನಪಿಸುತ್ತವಲ್ಲವೇ? ಆಶಯಗಳನ್ನು ಬದುಕಿನ ಮುಖಾಮುಖಿಯಲ್ಲಿ ಶೋಧಿಸಿಕೊಳ್ಳುವ ಪ್ರಕ್ರಿಯೆಗೆ ತಕ್ಕಮಟ್ಟಿನ ಯಶಸ್ಸು ಸಿಕ್ಕಿದ್ದರೂ ಇನ್ನಷ್ಟು ಗಾಢವಾಗುವ ಅಗತ್ಯವಿತ್ತೆನಿಸುತ್ತದೆ. ಹೀಗೆ, ಶ್ರಾವಕನಾದದ್ದೆಂದು ಹೇಳುತ್ತಾನೆ. ನಿರಹಂಕಾರಿಯಾಗಿ, ನಡು ಬಗ್ಗಿಸಿ, ಮುಜುಗರಗೊಳ್ಳದೆ, ಚಾಕರಿ ಮಾಡಿದ್ದರಿಂದಲೇ ತಾನು ಪಕ್ಕಾ ಸೇವಕನಾದೆನೆಂಬುದನ್ನು ಗಮನಿಸಿ. ಕುದುರೆಯ ದೇಖರೇಖಿ, ಅದು ತನ್ನ ಅವಿಭಾಜ್ಯವೆಂಬ ತಿಳಿವು, ವಿದುರನ ಮನೆಯ ಹೆಂಚನ್ನು ಹೊದೆಸಿದ್ದು - ಇತ್ಯಾದಿಗಳು ಅವನ ಚಾಕರಿಯ ರೀತಿಯನ್ನು ತಿಳಿಸುತ್ತವೆ. ಗಾಂಧಿಯ ಸೇವಾತತ್ಪರತೆ, ಕಾಯಕದ ಘನತೆಯನ್ನು ಎತ್ತಿ ಹಿಡಿಯುವಿಕೆ ಇತ್ಯಾದಿಗಳನ್ನು ನೆನಪಿಸುತ್ತಿರುವಂತಿದೆ. ಐದನೆಯ ಭಾಗ ಸ್ಪಷ್ಟವಾಗಿ ಗಾಂಧಿಯ ಚಿಂತನೆ, ಕ್ರಿಯೆ, ಕಾರ್ಯಕ್ರಮಗಳನ್ನು ತಿಳಿಸಿದೆ. ಐದನೇ ಭಾಗದ ,ಒಡಲ ನುಡಿ ಹೀಗಿದೆ:

ಓದೋನು ಒಬ್ಬ, ಕಾದೋನು ಒಬ್ಬ, ದನಿಯ ಮನೆಮುಂದೆ
ಕೈದೊಣ್ಣೆ ಕಾವಲ ಬಾಗಿಲಭಂಟ ಮತ್ತೊಬ್ಬ...
ಮೊಗದೊಬ್ಬ - ಖಂಡಿತ ಅಲ್ಲ, ನಾಲ್ಕನ್ನೂ ಮಾಡಿದ್ದು ನಾನು ಒಬ್ಬನೇ.

ನಾಲ್ಕು ಕ್ರಿಯೆಗಳು ಬೇರೆಬೇರೆಯಾಗದೆ, ಅಂತರಂಗದ ಅವಿಭಾಜ್ಯವೆಂಬ ತಿಳಿವಳಿಕೆ ಕವಿಯ ಗ್ರಹಿಕೆಯ ಸೂಕ್ಷ್ಮತೆಗೆ ಸೂಚಿ. ಅಖಂಡ ತಿಳಿವಳಿಕೆ/ಗ್ರಹಿಕೆಯನ್ನು

ಹುಡುಕಿಕೊಳ್ಳುವ ಪ್ರಕ್ರಿಯೆಯನ್ನು ಅದು ತಿಳಿಸುತ್ತದೆ. ಐದನೆಯ ಭಾಗವನ್ನು ಪಂಚಮಾಂಕವೆಂದಿರುವುದು ಉಚಿತವಾಗಿದೆ. ಬರಿಗೈಬಂಟ, ಚಕ್ರ, ನೂಲುವುದು, ಸತ್ಯಾಗ್ರಹ, ಉಪವಸದ ಮೂಲಕ ತನ್ನನ್ನು ತಾನು ತಿದ್ದಿಕೊಳ್ಳುವುದು, ತನ್ನ ಕೆಲಸವನ್ನು ತಾನೇ ಮಾಡಿಕೊಳ್ಳುವುದು – ಇತ್ಯಾದಿಗಳು ಕೃಷ್ಣನ ಬದುಕಿಗೆ ಗಾಂಧಿಯ ಸತ್ವವನ್ನು ತುಂಬುವುದರ ಮೂಲಕ ಪುರಾಣ – ವರ್ತಮಾನಗಳ ಮುಖಾಮುಖಿಯಲ್ಲಿ ಹೊಸ ತಿಳಿವಳಿಕೆಗೆ ಕವನ ಪ್ರಯತ್ನಿಸುತ್ತದೆ. ಗಾಂಧಿಯ ಸಾಧನೆಗಳ ಬೆಳಕಿನಲ್ಲಿ ಕೃಷ್ಣ ನನ್ನ ವರ್ತಮಾನಕ್ಕೆ ಪ್ರಸ್ತುತಗೊಳಿಸಿಕೊಳ್ಳುವ ರೀತಿ ವಿಶೇಷವಾಗಿದೆಯೆನಿಸುತ್ತದೆ. ನಿರ್ಧನನಾಗಬೇಕೆನ್ನುವುದು – ಸಂಪತ್ತು ಸಮಾಜದ್ದು, ಉಳ್ಳವರು ಅದರ ಟ್ರಸ್ಟಿಗಳಾಗಿರಬೇಕೆಂಬುದನ್ನು ಸೂಚಿಸುತ್ತಿರುವಂತಿದೆ. ಬಂಧಮೋಕ್ಷದ ಸಂಗ್ರಾಮಕ್ಕೆ ಸತ್ಯನಿಷ್ಠೆಯ ಆಯುಧದ ಅವಶ್ಯಕತೆಯಿದೆ ಎಂಬುದು, ಒಂದು ಇರುವೆ ಕೂಡ ನೋಯದ ಹಾಗೆ... ಪಾದಗಳನ್ನೆತ್ತಿಬಿಡಬೇಕೆಂಬುದು, ಪಂಚಮದ ಇಂಚರ ಎಷ್ಟು ಮಾತ್ರಕ್ಕೂನು ಒಡೆಯದಂತೆ ನೋಡಿಕೊಳ್ಳಬೇಕೆಂಬುದು ಗಾಂಧಿಯ ವಿಚಾರಗಳನ್ನೆ ಕೃಷ್ಣನದಾಗಿಸಿರುವ ಈ ಪರಿ ವಿಶಿಷ್ಟವಾಗಿದೆ. ಸಾಂಗತ್ಯ, ಸಮನ್ವಯ, ಸಾಮರಸ್ಯ, ಸೌಹಾರ್ದತೆಗಾಗಿ ಗಾಂಧಿ ಹೋರಾಡಿದ್ದು ತಾನೇ? ಆ ಪ್ರಯತ್ನ ಪೂರ್ಣ ಫಲಕಾರಿಯಾಗದಿದ್ದರೂ ಸಾಧಿಸಬೇಕಾದ ಆದರ್ಶ ತಾನೆ? ಈ ವೈಫಲ್ಯವನ್ನೂ ಕವಿತೆ ಗಮನಿಸಬಹುದಾಗಿತ್ತೇನೋ. ಹೀಗೆ, ಎಚ್ಚೆಸ್ವಿಯವರ ಗ್ರಹಿಕೆ ಆಳ–ಅಗಲವಾಗುತ್ತಾ ನಡೆದಿರುವುದು ನಮ್ಮ ಗಮನಕ್ಕೆ ಬರುವಂತಿದೆ. ಒಂದೊಂದು ಮುಖ ಮತ್ತೊಂದು ಮುಖಕ್ಕೆ ಅನ್ಯವೆಂದೆನಿಸದಂತೆ ನಿರ್ವಹಿಸಲು ಪ್ರಯತರ್ನಿಸಿರುವುದನ್ನು ಮೆಚ್ಚಬೇಕಾಗಿದೆ. ಆದರೆ, ಅವು ಇನ್ನಷ್ಟು ಗಟ್ಟಿಯಾಗಿ ಒಂದರಿಂದೊಂದು ಸೀಳಿಕೊಂಡು ಬರುತ್ತಲೇ ಒಂದಾಗಿರಬೇಕಾಗಿತ್ತೆನಿಸುತ್ತದೆ. ನಮ್ಮ ಕಾಲದ ಮಹಾನ್ ಚೇತನವೊಂದರ ವ್ಯಕ್ತಿತ್ವದ ಸಂಕೀರ್ಣತೆಗೆ ಕೃಷ್ಣನ ವ್ಯಕ್ತಿತ್ವವನ್ನು ಪುರಾಣದ ಚೌಕಟ್ಟನ್ನು ಹಿಗ್ಗಲಿಸಿಕೊಂಡು – ಪ್ರತಿಮೆಯಾಗಿ ದೂಪಿಸುತ್ತಾ, ವರ್ತಮಾನದ ಬದುಕಿಗೆ ಪುರಾಣದ ನೆನಪಿನಿಂದ ಹೊಸನೋಟವನ್ನು ಹೊಳೆಯಿಸುತ್ತಾ, ಪುರಾಣ ವರ್ತಮಾನಕ್ಕೆ ಪ್ರಸ್ತುತವಾಗುವಂತೆ ನೋಡಿಕೊಳ್ಳುವಲ್ಲಿ ಕವಿತೆ ಯಶಸ್ವಿಯಾಗಿದೆ. ಕವಿತೆ ಮೆಲುದನಿಯಲ್ಲಿ ಕಥಿಸುತ್ತಿದ್ದರೂ ಉಪದೇಶ, ಕೀರ್ತಿಸುವ ಧಾಟಿಗೆ ಹತ್ತಿರಹತ್ತಿರವಾಗಿ ಬಡುತ್ತದೇನೋ ಎಂಬ ಸಂಶಯ ಬಂದುಬಿಡುತ್ತದೆ. ಆದರೂ, ಕವಿತೆ ಸಮಗ್ರವಾದ, ಸಾಂಗತ್ಯಪೂರ್ಣ, ಅರ್ಥಪೂರ್ಣ ಬದುಕಿನ ಶೋಧನೆಯಾಗಿರುವುದನ್ನೂ ಗಮನಿಸಬೇಕಾಗುತ್ತದೆ. ಕವಿತೆಯಲ್ಲಿ ಗಾಂಧಿಯ ಛಾಪು ರಬ್ಬಾಗಿದ್ದರೂ ಅದು ಸೂಚನೆಯಾಗಿಯೇ ಉಳಿದು, ಕೃಷ್ಣನ ವ್ಯಕ್ತಿತ್ವಕ್ಕೆ ಆಧುನಿಕತೆಯ ಒಪ್ಪವನ್ನು ಕೊಟ್ಟಂತಿದೆ. ಪೌರಾಣಿಕ ಚೌಕಟ್ಟನ್ನು ಮುರಿಯದೇ ಹೊಸ ಆಯಾಮವನ್ನು ದಕ್ಕಿಸಿಕೊಡುವಲ್ಲಿ ಯಶಸ್ವಿಯಾಗಿರುವ ಈ ಕವಿತೆ ಆಧುನಿಕವೂ ಹೌದು. ಎಚ್ಚೆಸ್ವಿಯವರ ಒಟ್ಟು ಚಿಂತನೆ ಮತ್ತು ತಾತ್ವಿಕತೆಯ ದೃಷ್ಟಿಯಿಂದ ಆಪ್ತಗೀತೆ ಒಂದು ಮಹತ್ವದ ಕವಿತೆ.



ಗಾಂಧಿ ಎಂಬುವ ಬೆಳಕು

–ಪ್ರೊ.ಎಂ.ಚಂದ್ರಶೇಖರಯ್ಯ

ಪ್ರಸ್ತುತ ಭಾರತವನ್ನು ಗಾಂಧಿಯ ಮೂಲಕ ನೋಡುವುದು ಒಂದು ರೀತಿ ಕಷ್ಟದಾಯಕ ಸಂಗತಿ. ಇದೊಂದು ರೂಢಿಗತ ಪರಂಪರಾಗತ ಸಂಪ್ರದಾಯವಾಗಿಬಿಟ್ಟಿದೆ. ಯಾಕೆಂದರೆ ಭಾರತದಲ್ಲಿ ಕಮ್ಯೂನಿಷ್ಟರು ಬೇರು ಬಿಡಲು ಸಾಧ್ಯವಾಗಲಿಲ್ಲ. ಗಾಂಧಿಯ ಕೆಲ ಕೊರತೆಗಳನ್ನು ಅಂಬೇಡ್ಕರ್ ಮತ್ತು ಲೋಹಿಯಾ ಸರಿಪಡಿಸಿದರು ಅಥವಾ ತಿದ್ದಿ ನವೀಕರಿಸಿದರು. ಹೀಗಾಗಿ ಭಾರತದ ಬಗೆಗಿನ ಅಭಿವೃದ್ಧಿ ಅಥವಾ ಜಾಡಿನ ಬಗ್ಗೆ ನಾವು ಏನನ್ನೇ ಪರಾಮರ್ಶೆ ನಡೆಸಿದರೂ ಗಾಂಧಿಯ ನೆರಳನ್ನು ಮರೆಯಲಾಗದು.

1920ರಿಂದ 1990ರ ಅವಧಿಯೊಳಗಿನ ಏಳು ದಶಕಗಳ ಕಾಲ ಕಮ್ಯುನಿಸಂ ಚೈನಾ,ರಷ್ಯಾ,ಪೂರ್ವ ಜರ್ಮನಿ ಒಳಗೊಂಡಂತೆ ಜಗತ್ತಿನ ವಿವಿಧ ದೇಶಗಳಲ್ಲಿ ಬೇರು ಬಿಡಲು ಪ್ರಯತ್ನಿಸಿತಾದರೂ ಅದು ಮಾಯವಾಗಿ ಅಥವಾ ನಾಮಾವಶೇಷವಾಗಿ ಎರಡು ದಶಕಗಳು ಗತಿಸಿವೆ. ಪ್ರಸ್ತುತ ಚೈನದಲ್ಲಿನ್ನೂ ಕಮ್ಯುನಿಸಂ ಉಳಿದಿದೆಯಲ್ಲಾ ಎಂಬ ಸವಾಲಿನ ಪ್ರಶ್ನೆಗೆ, ಚೈನದ ಬೆಳವಣಿಗೆ, ಆರ್ಥಿಕ ನೀತಿ ಪರಿಗಣಿಸಿದರೆ ಆ ದೇಶದ ವಸ್ತುಗಳು ಅಗ್ಗದ ದರದಲ್ಲಿ ಜಗತ್ತಿನ ಎಲ್ಲ ಬಡ ದೇಶಗಳಲ್ಲಿ, ಮಾರುಕಟ್ಟೆಗಳಲ್ಲಿ ಲಭಿಸುವುದನ್ನು ಗಮನಿಸಿದರೆ; ಅದು ಬಣ್ಣದಲ್ಲಿ ಕೆಂಪು ಉಳಿಸಿಕೊಂಡರೂ ನೀತಿಯಲ್ಲಿ ಬಂಡವಾಳವನ್ನು ತೆರೆದಿಟ್ಟು ಮಾರುಕಟ್ಟೆ ಬಲಪಡಿಸುವ ಬಂಡವಾಳಶಾಹೀ ದೇಶವಾಗಿದೆ. ಅಥವಾ ಉತ್ಪಾದನೆ ಮೂಲಕ ಆರ್ಥಿಕತೆಯನ್ನು ಬಲಪಡಿಸುವ ಹೆಜ್ಜೆಗಳನ್ನಿಡುತ್ತಿರುವ ದೇಶವಾಗಿದೆ. ಭಾರತವನ್ನು ಈ ಸಂದರ್ಭದಲ್ಲಿ ನೋಡುವಾಗ ಗಾಂಧಿಯ ಮೂಲಕ ಅಥವಾ ಗಾಂಧಿ ರಹಿತ ಎಂಬ ಎರಡು ಆಯಾಮಗಳನ್ನು ಇಲ್ಲಿ ಕಲ್ಪಿಸಿಕೊಳ್ಳಲಾಗಿದೆ. ಗಾಂಧಿಯ ಸ್ವರಾಜ್ಯವನ್ನು ನವೀಕರಿಸಿ ಚಲಾಯಿಸುವ ತುರ್ತು ಬೃಹತ್ ಭಾರತಕ್ಕೆ ಅತ್ಯವಶ್ಯವಾಗಿದೆ.

ಗಾಂಧಿ ರಹಿತ ನೋಡುವ ಬಗೆ ಎಂದರೆ ಬಂಡವಾಳವನ್ನು ಚೆಲ್ಲಿ

ಬಾಚಿಕೊಳ್ಳುವುದು ಎಂದೇ ಅರ್ಥ. ಪ್ರಜಾಪ್ರಭುತ್ವ ಮಾದರಿಯನ್ನು; ದೇಶವನ್ನು; ಬಿಂಬಿಸುವ ಸಲುವಾಗಿ ಬಂಡವಾಳವನ್ನು ಎಲ್ಲರೂ ಬಳಸುತ್ತಾರೆ. ಭಾರತವನ್ನು ಜಗತ್ತಿನ ಅತ್ಯುನ್ನತ ಶ್ರೇಷ್ಠ ಮಾದರಿ ಎಂದೇ ಕಥನಗಳನ್ನು ಜೋಡಿಸಿ, ನೇಯ್ದು ವ್ಯಾಖ್ಯಾನಿಸಿ ಹೇಳಲಾಗುತ್ತದೆ. ಹೌದು, ಮೇಲ್ನೋಟದಲ್ಲಿ ಇದು ಸರಿಯೇ. ಆದರೆ ಶ್ರೇಷ್ಠ ಮಾದರಿ ಉಳಿಸಿಕೊಳ್ಳುವುದು ಎಂದರೆ ನೀವು ರಾಷ್ಟ್ರದೊಳಗೆ ಯಾವ ಮಾದರಿಯ ಆರ್ಥಿಕ ನೀತಿ ಅಳವಡಿಸಿಕೊಂಡಿದ್ದೀರಿ ಎನ್ನುವುದು ಅತ್ಯಂತ ಮುಖ್ಯ ಪ್ರಶ್ನೆ. ಬಂಡವಾಳವನ್ನು ಹೂಡುವುದು ಎಂದರೆ ಅಭಿವೃದ್ಧಿ ಮೂಲಕ ಪ್ರಭುತ್ವವನ್ನು ಶ್ರೇಣೀಕೃತ ಎತ್ತರಕ್ಕೆ ಒಯ್ಯುವುದು ಎನ್ನುವುದು ಖಂಡಿತ ಒಂದು ಭ್ರಮೆಯೇ ಹೌದು. ಆದರೆ ಅದೇ ವೇಳೆಯಲ್ಲಿ ದೇಶದ ಮಾನವ ಸಕ್ತಿಯ ಗಾತ್ರ, ಭೌಗೋಳಿಕ ಸಂಪನ್ಮೂಲ, ದುಡಿಯುವ ಕೈಗಳಿಗೆ ಕೆಲಸ ಒದಗಿಸುವ ಬಗೆಯಲ್ಲಿನ ಶ್ರಮ ಮತ್ತು ಯಂತ್ರ ಇವೆರಡರ ನಡುವಿನ ಆಯ್ಕೆ ಇವೆಲ್ಲವನ್ನೂ ಸೂಕ್ಷ್ಮಾತಿ ಸೂಕ್ಷ್ಮ ಅವಲೋಕನೆಗೆ ಒಳಪಡಿಸಿ ಆಯಾ ದೇಶಕ್ಕೆ ಅಳವಡಿಸಿಕೊಳ್ಳುವುದು ನಿಜವಾದ ಅರ್ಥಶಾಸ್ತ್ರೀಯ ಗುರಿಯಾಗಿರುತ್ತದೆ.

ಅಮೇರಿಕಾ ಮತ್ತು ಯೂರೋಪಿಯನ್ ಮಾದರಿ ಅರ್ಥಶಾಸ್ತ್ರ ವಿಧಾನಗಳು ಭಾರತಕ್ಕೆ ಖಂಡಿತ ಅಳವಡದು. ಏಕೆಂದರೆ ಇದು ಬಹು ಜಾತಿ–ವರ್ಗಗಳ ಅಸಮಾನತೆಗಳಿರುವ ಬಡತನವನ್ನು ಸೂಕ್ತವಾಗಿ ನಿರ್ವಹಿಸಿ, ನಿರ್ಮೂಲನೆ ಮಾಡಿರದ, ಮಾಡುವ ಖಚಿತ ಗುರಿಗಳನ್ನು, ರಾಜಕೀಯ ಇಚ್ಚಾಶಕ್ತಿಗಳು ಪೊಂದಿರದ ರಾಷ್ಟ್ರವಾಗಿದೆ. ಭಾರತದಲ್ಲಿ ನೈಸರ್ಗಿಕ ಸಂಪನ್ಮೂಲಗಳನ್ನು ಬಂಡವಾಳ ಶಕ್ತಿಗಳು ಮೋಸ, ವಂಚನೆಗಳ ಮೂಲಕ ಕೊಳ್ಳೆಹೊಡೆಯುತ್ತಿರುವಾಗ ಅದರ ವಿರುದ್ಧ ಸರ್ಕಾರಗಳು ನಿರ್ದಯ ಕಠಿಣ ಕ್ರಮಗಳನ್ನು ಕೈಗೊಂಡ ಉದಾಹರಣೆಗಳೇ ವಿರಳ. ಹಾಗಾಗಿಯೇ ಗಾಂಧಿಯನ್ನು ಮರೆತ ರಾಜಕೀಯದ ದುಃಸ್ಥಿತಿ ನೆನಪಾಗದಿರದು. ಗಾಂಧಿ ಪ್ರಣೀತ ಅರ್ಥಶಾಸ್ತ್ರ ಎಂದರೆ "ಚರಕ" ಒಂದು ಸಂಕೇತ. ಒಂದು ಮಾದರಿ. ಒಂದು ದರ್ಶನ. ಎಲ್ಲಕ್ಕಿಂತ ಮಿಗಿಲಾಗಿ ಚರಕ ಭಾರತದ ಜನಸಂಖ್ಯೆಗೆ ಸೂಕ್ತ ಉತ್ತರವೂ ಹೌದು. ಹಸಿವು ನೀಗಲು ದುಡಿಮೆ ಹುಡುಕುವ ಮಾನವ ಶಕ್ತಿಗೆ ಚರಕ ಒಂದು ಪವಾಡ ಸದೃಶ ಸರಳ ಯಂತ್ರ. ಅಲ್ಲಿಂದ ನೀವು ಮಗ್ಗ, ಕರಕುಶಲ ಕೌಶಲ್ಯ, ಮಾನವ ಶಕ್ತಿ ವ್ಯಯಿಸುತ್ತ ಉತ್ಪಾದಿಸುವ ಯಾವುದೇ ಉತ್ಪಾದನೆಯಾದರೂ ಅದರ ಹಿಂದೆ ಗಾಂಧಿ ಇದ್ದಾರೆ ಎಂದೇ ಅರ್ಥ. ಇದರರ್ಥ ಚರಕ ಒಂದೇ ಏಕೈಕ ಮಾದರಿ ಎಂದೇನೂ ಅಲ್ಲ. ಕೃಷಿ, ಕೈಗಾರಿಕೋತ್ಪನ್ನ, ಯಂತ್ರ ಸೃಷ್ಟಿ, ವಾಹನಗಳ ನಿರಂತರ ಸತತ ಉತ್ಪಾದನೆ ಇವೆಲ್ಲ ಬಗೆಗಳಿಗೂ

ಸರಳತೆ, ಮಿತಿ ಮತ್ತು ಅಗತ್ಯಕ್ಕಷ್ಟೆ ಉತ್ಪಾದನೆ ಎಂಬುದನ್ನು ಗ್ರಹಿಸಿದರೆ

ನಿಮಗೆ ಮಿಕ್ಕದ್ದು ಹೊಳೆದಿದೆ ಎಂದು ಅರ್ಥ. ಹತ್ತು ಸಾವಿರ ಮಾನವ ಶಕ್ತಿಯಿಂದ ನಿರ್ವಹಣೆ ಹೊಂದುತ್ತಿದ್ದ ಒಂದು ಕಾರ್ಖಾನೆ ಸಾವಿರ ಕೋಟಿ ಬಂಡವಾಳವನ್ನು ಆರ್ಥಿಕವಾಗಿ ಸುರಿದು ಅತ್ಯಾಧುನಿಕ ತಾಂತ್ರಿಕ ಕೌಶಲ್ಯಗಳಿಂದ ನವೀಕರಣ ಹೊಂದಿದರೆ ಅಲ್ಲಿ ಮಾನವ ಶಕ್ತಿಯ ಶೇಕಡ ಪಾವತ್ತು ಕೆಲಸ ಕಳೆದುಕೊಳ್ಳುತ್ತದೆ. ಬೃಹತ್ ಉತ್ಪಾದನೆಗಳು, ಸತತ ಉತ್ಪಾದನೆ, ಗುರಿ ಮುಟ್ಟಲೇಬೇಕೆಂಬ ಉತ್ಪಾದನೆಗಳು ಶ್ರೀಮಂತ ಉದ್ಯಮಿಗಳನ್ನು ಸೃಷ್ಟಿಸುತ್ತದೆ. ಇದೇ ಕ್ರಮಕ್ಕೆ ಬದಲಾಗಿ ಸಾರ್ವಜನಿಕ ಉದ್ದಿಮೆ. ಸಹಕಾರಿ ತತ್ವದ ಉದ್ದಿಮೆ, ಅತ್ಯಾಧುನಿಕತೆಗೆ ಪರಿವರ್ತನೆ ಹೊಂದಿರದ ಉದ್ದಿಮೆಗಳು ಮಾನವ ಶಕ್ತಿಗೆ ಪೂರ್ಣ ಅವಧಿಯ ಕೆಲಸ ನೀಡಬಲ್ಲವು.


ಈ ಕ್ಷಣದ ವಾಸ್ತವಗಳನ್ನು ಮರೆತು ಯುರೋಪಿಯನ್ ಆಲೋಚನೆ ಎಂದು ಒಂದು ಕ್ಷಣ ಅನಿಸುತ್ತದೆ. ನಿಜ, ನಮ್ಮ ಸಾರ್ವಜನಿಕ ವಲಯದ ಉದ್ದಿಮೆಗಳು ಅದಕ್ಷತೆಯಿಂದ ನರಳುತ್ತಿವೆ. ನಮ್ಮ ಸಹಕಾರೀ ತತ್ವದ ಉದ್ದಿಮೆಗಳು – ಬಹುಪಾಲು ಸಕ್ಕರೆ ಕರ್ಖಾನೆಗಳು – ಸರ್ಕಾರದ ಕಟುನೀತಿಗೆ ಹೈರಾಣಾಗಿದೆ. ಇದನ್ನು ಸರಿಪಡಿಸುವುದು ಹೇಗೆ? ಮಾತುಗಳೆಲ್ಲ ಆದರ್ಶದ ಸ್ತರದಲ್ಲಿ ತೇಲುತ್ತಿದೆ ಎನಿಸುತ್ತಿದೆ. ಸಹಕಾರೀ ಮತ್ತು ಸಾರ್ವಜನಿಕ ಉದ್ದಿಮೆಗಳಿಗೆ ಜೀವ ತುಂಬುವುದು ಎಂದರೆ ಆ ಕಾರ್ಖಾನೆಯಲ್ಲಿ ದುಡಿಯುತ್ತಿರುವ ಹಿರಿಯ ಕಾರ್ಮಿಕ ಮತ್ತು ಅಧಿಕಾರೀ ವರ್ಗದ ಸಲಹೆ ತಜ್ಞ ಪರಿಣತಿ ಬಳಸಿಕೊಳ್ಳುವ ಸಂಹಿತೆಯನ್ನು ಖಡ್ಡಾಯವಾಗಿ ಅಳವಡಿಸಿಕೊಳ್ಳುವುದು ಎಂದೇ ಅರ್ಥ. ಹಾಗಾದಾಗ ಇದೇನೂ ಹೊರೆಯಲ್ಲ. 'ಸಾರ್ವಜನಿಕ' ಎಂದಾಕ್ಷಣ ಅಧಿಕಾರಿಯ ತೀರ್ಮಾನಗಳಿಗೂ ದುಡಿಯುವ ವರ್ಗಗಳಿಗೂ ದೇಶದ ಆಸ್ತಿ ನಮ್ಮದಲ್ಲವೇ– ಎನ್ನುವ ಸಾಮಾನ್ಯ ಭಯವೂ ಮಾಯವಾಗಿ ಬಿಡುವುದು ಈ ಹೊತ್ತಿನ ಭ್ರಷ್ಟತೆ. ಅದನ್ನು ಮೀರುವುದು ಎಂದರೆ ರಾಷ್ಟ್ರೀಯತೆಯನ್ನು ಕಾಯ್ದುಕೊಳ್ಳುವ ಜವಾಬ್ದಾರಿಯ ಹಾಗೂ ಎಚ್ಚರದ ಅರಿವು. ರಾಜಕೀಯ ಭ್ರಷ್ಟತೆ ಕೂಡ ನಮ್ಮ ಸಾರ್ವಜನಿಕಮ ಉದ್ದಿಮೆಗಳನ್ನು ಕಂಗೆಡಿಸಿದೆ. ಅದೇ ವೇಳೆಯಲ್ಲಿ ಖಾಸಗಿ ಉದ್ದಿಮೆಗಳು ಯಶಸ್ವಿಯಾಗಿದೆ ಎಂದರೆ ಅದು ಸತ್ಯದ ಮುಖವಲ್ಲ. ಅವುಗಳಿಗೆ ತೆರಿಗೆ ರಿಯಾಯ್ತಿ, ಸ್ಥಾಪನೆಗೆ ಭೂಮಿ ಹಂಚಿಕೆ, ಅವೇ ನಿಗದಿಪಡಿಸಿಕೊಳ್ಳುವ ದರಗಳಿಗೆ ಸರ್ಕಾರ ಕಣ್ಣುಮುಚ್ಚುವುದು, ಬಂಡವಾಳ ಶಾಹಿ ಪಕ್ಷಗಳಿಗೆ ನೀಡುವ ಕಪ್ಪು ಹಣ, ಇಂತಹ ಅಂಶಗಳು ಕಾರಣವಾಗಿವೆ. ಹಾಗಾಗಿಯೇ ನಾವು ಗಾಂಧಿಯಿಂದ ದೂರ ಸರಿದ ಆರ್ಥಿಕ ಅಸಮತೋಲನದಲ್ಲಿ ನರಳುತ್ತಿದ್ದೇವೆ. ನಮ್ಮ ಕೊಳೆಗೇರಿ, ದಲಿತರ ಕಾಲೋನಿಗಳು, ನಿರ್ವಸಿತರ ಕೇಂದ್ರಗಳು, ದುಡಿಮೆ ಸಾಕಾಗದೆ ಕಂಗಾಲಾಗಿರುವ ಅತಂತ್ರ ಕುಟುಂಬಗಳು, ರೈತರ ಸರಣಿ ಆತ್ಮಹತ್ಯೆಗಳು ನಿಜಕ್ಕೂ ಗಾಂಧಿಯನ್ನು ಮರೆತ ನಾಡಿನ ಶಾಪದ ಫಲಗಳಂತಿವೆ. ಈ ಬಗ್ಗೆ

ಪಾರ್ಲಿಮೆಂಟಿಗೆ ದಿಗಿಲು ಹುಟ್ಟಿಲ್ಲ. ಹುಟ್ಟುವುದೂ ಇಲ್ಲ. ಬಂಡವಾಳ ಅತಿಯಾಗಿದ್ದವನಷ್ಟೇ ಅಭ್ಯರ್ಥಿ ಎಂಬ ತತ್ವ ಛಾಪು ಮೂಡಿಸಿದ್ದು ಮನುಷ್ಯನ ಹೃದಯ ಶ್ರೀಮಂತಿಕೆಯ ಬಂಡವಾಳ ಎಂಬ ತತ್ವ ಕಾಂಗ್ರೆಸ್, ಬಿಜೆಪಿ ಒಳಗೊಂಡು ಎಲ್ಲಾ ಪಕ್ಷಗಳಿಗೂ ಅನ್ವಯಿಸುತ್ತದೆ. ಹೀಗಾಗಿಯೇ ಗಾಂಧಿ ಇಲ್ಲದ ನಾಡು ಬಳಲುತ್ತಿದೆ, ಸೊರಗುತ್ತಿದೆ. ಮಾನವಶಕ್ತಿಯ ಸದ್ಬಳಕೆಯ ಪರಿಕಲ್ಪನೆ ಮಾಯವಾಗಿದೆ. ಬಂಡವಾಳದ ಪರಿಕಲ್ಪನೆ ಹುಚ್ಚುನಾಯಿ ಕಡಿತದಂತೆ ಉಲ್ಬಣಿಸುತ್ತಿದೆ. ಬಂಡವಾಳ ನಿರ್ವಹಣೆ ಎಂದರೆ ನೂರು ರೂಪಾಯಿಯನ್ನು ಹಸಿದವರಿಗೆ ಸಮಾನವಾಗಿ ಹಂಚು ಎಂಬ ಅರಿವು ಮಾಯವಾಗಿ ಅದನ್ನು ತತ್‌ಕ್ಷಣ ಸಾವಿರ ರೂ. ಮಾಡುವುದನ್ನು ತೋರಿಸು ಎನ್ನುವ ಹದಗೆಟ್ಟ ಆರ್ಥಿಕ ನೀತಿಗಳು ಚಿಗುರುತ್ತಿವೆ. ಇಂತಹ ಕಾರಣಗಳಿಗಾಗಿಯೇ ನಮಗೆ ಗಾಂಧಿ ಬೇಕಾಗಿದ್ದಾರೆ. ಹಿಂದ್ ಸ್ವರಾಜ್ ಚಿಂತನೆಗಳನ್ನು ನಮ್ಮ ಪಾರ್ಲಿಮೆಂಟಿಗೆ, ಈ ಕ್ಷಣದ ದರ್ದು ತುರ್ತು ಅಗತ್ಯಗಳೊಂದಿಗೆ ಅನ್ವಯಿಸಿ, ಹೊಂದಿಸಿ ಪರಿಚಯಿಸಬೇಕಾದ ಗಾರುಡಿಗನೊಬ್ಬ ತುರ್ತಾಗಿ ಬೇಕಾಗಿದ್ದಾನೆ. ಅಣ್ಣಾ ಹಜಾರೆ, ಅರವಿಂದ್ ಕೇಜ್ರಿವಾಲ್ ಎಲ್ಲೋ ಬೆಳಕಿನ ಕಿಂಡಿ ತೆರೆಯುತ್ತಿದ್ದಾರಲ್ಲವೇ ಎಂದು ನಾವು ಪಕ್ಕದಲ್ಲಿ ಇಣುಕಿ ನೋಡುವ ಹೊತ್ತಿಗೆ ಚಿಗುರ ತೊಡಗಿದ್ದ ಮೊಳಕೆಗಳು ಹಾಗೇ ಒಣಗಿ ಮುರುಟಿಕೊಂಡವು. ರೈತರು, ಕಾರ್ಮಿಕರು, ಕೂಲಿಕಾರರು, ಶ್ರಮಜೀವಿಗಳು, ನಿರ್ವಸಿತರು, ಗುಳೇ ಏಳುತ್ತಿರುವ ವಲಸಿಗ ಎಲ್ಲರೂ ದಿಕ್ಕು ಕಾಣದೆ ನಾಯಕತ್ವವನ್ನ ಅನ್ಯಾಯದ ವಿರುದ್ಧ ಸೂಕ್ತ ನ್ಯಾಯವನ್ನೇ ಕಾಯುತ್ತಿದ್ದಾರೆ.

ವಿಕೇಂದ್ರೀಕರಣದ ರಾಜಕಾರಣ, ಮೀಸಲಾತಿ ರಾಜಕಾರಣ, ಮುಕ್ತ ಆರ್ಥಿಕ ನೀತಿ ಎಲ್ಲೂ ಔಷಧಿ, ಚಿಕಿತ್ಸೆ ಸಿಗುತ್ತಲೇ ಇಲ್ಲ. ಸೊರಗುತ್ತಿರುವ ಭಾರತಕ್ಕೆ ಗಾಂಧಿ ಚಿಂತನೆ, ಆರ್ಥಿಕ ನೀತಿಗಳು ಬೆಳಕಾಗಬಲ್ಲವು. ಬೆಳಕು ಮೂಡಿಸುವ ಗಾರುಡಿಗ ಬೇಕಾಗಿದ್ದಾನೆ. ಕುಲಗೆಟ್ಟು ಹೋಗುತ್ತಿರುವ ಆಳುವವರ ನೀತಿಗಳ ಚಿಂತನ ಕೇಂದ್ರವಾದ ಪಾರ್ಲಿಮೆಂಟಿನ ಬಗ್ಗೆ ಭ್ರಮನಿರಸನ ಹೆಚ್ಚುತ್ತಿದೆ.

○ ○ ○

ಖಾದಿ ವಿಚಾರ



ಗ್ರೀನ್ ಎಕಾನಮಿ ಮತ್ತು ಚರಕ

ಖಾದಿ ತತ್ವಶಾಸ್ತ್ರದ ಕೇಂದ್ರ ವಿಚಾರ ಸ್ವಾವಲಂಬನೆ. ಆಧುನಿಕ ಶಾಂತಿ ಶೋಧನೆಯ ತಂದೆಯಾದ ಜಾನ್‌ಗುಲ್ವಗ್ ಹೇಳುವಂತೆ ಸ್ವಾವಲಂಬನೆಯ ಮೂಲಕ ಪರಿಸರಾತ್ಮಕ ಸಮತೋಲನವನ್ನು ಸುಲಭವಾಗಿ ಸಾಧಿಸಬಹುದು. ಉತ್ಪಾದನೆ ಮತ್ತು ಉಪಭೋಗ ಮಿತಗೊಳ್ಳುವುದರಿಂದ ಪ್ರಾಕೃತಿಕ ಸಂಪತ್ತಿನ ಕರಗುವಿಕೆ ಮತ್ತು ಕಶ್ಮಲತೆ ಕಡುಮೆಯಾಗುವ ಸಂಗತಿ ಸ್ಪಷ್ಟವಾಗಿ ಗೋಚರಿಸುತ್ತದೆ ಮತ್ತು ನೇರವಾಗಿ ಅನುಭವಕ್ಕೆ ಬರುತ್ತದೆ. ರೈತ ಸಾಮಾನ್ಯವಾಗಿ ತಾನು ಉಪಯೋಗಿಸುವುದನ್ನೇ ಬೆಳೆಯುವುದರಿಂದ ಮತ್ತು ಬೆಳೆದದ್ದನ್ನೇ ಉಪಯೋಗಿಸುವುದರಿಂದ ಪ್ರಾಕೃತಿಕ ಸಂಪತ್ತಿನ ಕರಗುವಿಕೆ ಮತ್ತು ಕಶ್ಮಲತೆ ತನ್ನ ಮತ್ತು ಮಕ್ಕಳ ಜೀವನಕ್ಕೂ ಅಪಾಯಕಾರಿ ಎಂಬ ಗಟ್ಟಿ ಜ್ಞಾನ ಅವನಿಗಿರುತ್ತದೆ. ಈ ಜ್ಞಾನವೇ ಪರಿಸರಾತ್ಮಕ ಸಮಸ್ಯೆಗಳು ಉಂಟಾಗದಂತೆ ಮಾಡುತ್ತದೆ. ಪ್ರಾಕೃತಿಕ ಸಂಪತ್ತಿನ ಕೊರತೆಗೆ ಆಗಿರಬಹುದಾದ ಕಾರಣಕ್ಕೆ ಜಗತ್ತಿನ ಯಾವುದೋ ಒಂದು ದೂರದ ಸ್ಥಳವನ್ನು ದೂಷಿಸಲಾಗುವುದಿಲ್ಲ. ಏಕೆಂದರೆ ಆ ಮೂಲೆಯಲ್ಲಿರುವ ಜನರು ಕೂಡ ಸ್ವಾವಲಂಬನೆಯನ್ನು ಸಾಧಿಸಲು ಪ್ರಯತ್ನ ಮಾಡುತ್ತಿರುತ್ತಾರೆ ಮತ್ತು ಕಚ್ಚಾ ಪದಾರ್ಥವನ್ನು ಹೊರಗೆ ಕಳುಹಿಸುವುದಿಲ್ಲ. ಕಳುಹಿಸಿದರು ಕೂಡ ತಮ್ಮಂತೆಯೇ ಸ್ವಾವಲಂಬನೆಗಾಗಿ ಪ್ರಯತ್ನ ಮಾಡುತ್ತಿರುವ ನೆರೆಯವರಿಗೆ ಕಳುಹಿಸಬಹುದು ಅಷ್ಟೇ. (ಗುಲ್ವಗ್ 1976) ಖಾದಿ ಮಾನವ ಶಕ್ತಿಯಿಂದ ನಡೆಯುವುದರಿಂದ ಉತ್ಪಾದನೆಗೆ ಒಂದು ಮಿತಿ ಇದ್ದೇ ಇರುತ್ತದೆ. ಇದರಿಂದಾಗಿ ಆಯಾ ಭೌಗೋಳಿಕ ಪ್ರದೇಶ ಉನ್ನತಿ ಸಾಧಿಸಲು ಸಾಧ್ಯವಾಗುತ್ತದೆ. ಖಾದಿ ಉದ್ಯಮ ಹೆಚ್ಚಾಗಿ ನವೀಕರಿಸಬಹುದಾದ ಸ್ಥಳೀಯ ಪದಾರ್ಥಗಳನ್ನೇ ಉಪಯೋಗಿಸುವುದರಿಂದ ಮತ್ತು ಸ್ಥಳೀಯ ಮಾರುಕಟ್ಟೆಗಾಗಿ ಉತ್ಪಾದಿಸುವುದರಿಂದ ಪರಿಸರಾತ್ಮಕ ಸಮಸ್ಯೆಗಳು ಬಹಳ ಕಡಿಮೆ. ಹೀಗೆ ಖಾದಿ ಪರಿಸರಕ್ಕೆ ಮತ್ತು ಪ್ರಾಕೃತಿಕ ಸಂಪನ್ಮೂಲಗಳಿಗೆ ಎಷ್ಟು ಸಾಧ್ಯವೋ ಅಷ್ಟು ಕಡಿಮೆ ನಷ್ಟ ಮಾಡುವುದೇ ಎಂಬ ಗ್ರೀನ್ ಎಕಾನಮಿಯ ಮೂರನೇಯ ಅಳತೆಗೋಲನ್ನು ಪೂರೈಸುತ್ತದೆ.

ಖಾದಿ ಕೇವಲ ಬಟ್ಟೆಯ ತುಂಡನ್ನು ಉತ್ಪಾದಿಸುವುದಿಲ್ಲ. ಅದು ತನ್ನನ್ನು ತಾನು ಉಳಿಸಿಕೊಳ್ಳುತ್ತಾ ನಿರಂತರವಾಗಿ ಅಭಿವೃದ್ಧಿಯನ್ನು ಸಾಧಿಸುತ್ತ ಇರುವ ಉದ್ಯಮವಾಗಿದೆ. ಪರಿಪೂರ್ಣ ಉದ್ಯೋಗ ಕೊಡಬೇಕೆಂಬುದು ಆರ್ಥಿಕೋನ್ನತಿಯ ತಿರುಳಾಗಿದೆ. ಸಮುದಾಯದ ಎಲ್ಲ ಜನರಿಗೆ ಉದ್ಯೋಗಕೊಡುವುದರ ಜೊತೆಗೆ ಉತ್ಪಾದಿತವಾದ ಪದಾರ್ಥಗಳಿಗೆ ಅಗತ್ಯವಾದ ಬೇಡಿಕೆಯನ್ನು ಉಂಟುಮಾಡಿ ಆ ಉದ್ಯಮ ತಾಳುವಂತೆ ಮಾಡುವುದು ಅಗತ್ಯ. ಖಾದಿ ಸ್ವಉದ್ಯೋಗದ ಸೃಷ್ಟಿಯ ಜೊತೆಗೆ ಖರೀದಿಮಾಡುವ ಆರ್ಥಿಕ ಬಲವನ್ನು ಸೃಷ್ಟಿಸುತ್ತದೆ. ಖಾದಿ ಸ್ವತಃ ಉದ್ಯೋಗ ಸೃಷ್ಟಿಸುವುದರಿಂದ ಪ್ರಾಕೃತಿಕ ಸಂಪತ್ತಿನಲ್ಲಾಗಲೀ, ಮಾನವ ಸಂಪನ್ಮೂಲದಲ್ಲಾಗಲೀ ಶೋಷಣೆಯಾಗುವುದಿಲ್ಲ. ಹೀಗೆ ಅದು ಅಹಿಂಸಾತ್ಮಕ ಸಮಾಜ ವ್ಯವಸ್ಥೆಯನ್ನು ಉಂಟುಮಾಡಿ ಗಾಂಧೀ ಹೇಳಿದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತದೆ. ನಿರುದ್ಯೋಗಗಳಿಗೆ ಆರ್ಥಿಕ ನೆರವನ್ನು ಕೊಡುವುದು ಅಥವಾ ಬಡವರಿಗೆ ಕೂಲಿಕೊಡುವುದಷ್ಟೇ ರಚನಾತ್ಮಕ ಕೆಲಸದ ಗುರಿಯಲ್ಲ ಸಶಕ್ತ ಅಹಿಂಸಾತ್ಮಕ ಸಮಾಜರಚನೆ ಮಾಡುವುದು ಉದ್ದೇಶವಾಗಿದೆ (ಗ್ರೇಗ್, 1958), ಖಾದಿ ಸ್ವಾವಲಂಬನಾಧಾರಿತ ಸ್ಥಳೀಯ ಉತ್ಪಾದನೆ ಮತ್ತು ಸ್ಥಳೀಯ ಬಳಕೆ ಆಧಾರಿತ ಉದ್ಯಮ ಆಗಿರುವುದರಿಂದ ಸ್ಪರ್ಧೆಯಾಗಲಿ ವಿಚಾರಹೀನವಾಗಿ ಮಾರಾಟ ಹೆಚ್ಚಿಸುವ, ಬೇಹುಗಾರಿಕೆ ಮಾಡುವ ಮತ್ತು ಅಪನಂಬಿಕೆ, ಕಲಬೆರಕೆ, ಜೂಜು, ಭ್ರಷ್ಟಾಚಾರ, ವ್ಯವಹಾರಮಾಡುವ ಸಂಸ್ಥೆಗಳ ಮೇಲೆ ಹತೋಟಿ ಮುಂತಾದವುಗಳು ಇರುವುದಿಲ್ಲ. ಆದ್ದರಿಂದ ಖಾದಿ ಮೂಲಕ ಸೃಷ್ಟಿಯಾಗುವ ಉದ್ಯೋಗಗಳು ವಿಶೇಷ ನೈತಿಕ ಮೌಲ್ಯಗಳಿಂದ ಕೂಡಿದ ಅರ್ಥವತ್ತಾದ ಉದ್ಯೋಗವಾಗಿರುತ್ತವೆ. ಆಧುನಿಕ ಉತ್ಪಾದನಾ ಪದ್ಧತಿ ಜನರನ್ನು ಒಬ್ಬರಿಂದ ಒಬ್ಬರನ್ನು ದೂರ ಮಾಡುವ ಹಾಗೆ ಖಾದಿ ಉದ್ಯಮ ಮಾಡುವುದಿಲ್ಲ. ಬದಲಿಗೆ ಅದು ಸಮುದಾಯದಲ್ಲಿ ಪರಸ್ಪರಾವಲಂಬನೆ ಸೃಷ್ಟಿಸುವುದರ ಮೂಲಕ ಪರಸ್ಪರ ಅವಲಂಬನೆಯ ಮೌಲ್ಯ ಅರ್ಥವಾಗುವಂತೆ ಮಾಡುತ್ತದೆ. ಹೀಗೆ ಖಾದಿ ಗ್ರೀನ್ಎಕಾನಮಿಯ ನಾಲ್ಕನೇ ಅಳತೆಗೋಲಾದ ಅರ್ಥವತ್ತಾದ ಉದ್ಯೋಗ ಸೃಷ್ಟಿ ಮತ್ತು ಸಮುದಾಯದ ಹಿತದಲ್ಲಿ ಭಾಗವಹಿಸುವಂತೆ ಮಾಡುವುದೇ ಎಂಬ ಅಳತೆಗೋಲನ್ನು ಪೂರೈಸುತ್ತದೆ.

ಖಾದಿ ಸಮುದಾಯದ ಬೌಧಿಕ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಕೈ, ತಲೆ ಮತ್ತು ಹೃದಯ ಸೇರಿಕೊಂಡು ಒಂದು ಕೆಲಸವನ್ನು ಸಾಧಿಸುವಾಗ ವ್ಯಕ್ತಿಯ ಸಾಮರ್ಥ್ಯಗಳು ಬೆಳೆಯುವ ಪೂರ್ಣ ಅವಕಾಶ ದೊರೆಯುತ್ತದೆ. ಈ ಉದ್ಯಮದಲ್ಲಿ ಸಮುದಾಯದ ವ್ಯಕ್ತಿಗಳು ಕೇವಲ ಕೂಲಿಗಳಾಗಿ ಇರದೆ ಉತ್ಪಾದಕರಾಗಿರುತ್ತಾರೆ.

ತತ್ಪರಿಣಾಮವಾಗಿ ಅವರ ಬೌಧಿಕ ಕೌಶಲ್ಯಗಳು ಬೆಳೆಯುವುದಕ್ಕೆ ಅವಕಾಶ ದೊರಯುತ್ತದೆ. ಸಮುದಾಯದ ಪ್ರತಿಯೊಬ್ಬನೂ ಈ ಉದ್ಯಮದಲ್ಲಿ ತೊಡಗಬಹುದು. ಸೋಮಾರಿತನವೆಂಬುದು ಇರುವುದಿಲ್ಲ. ಸೋಮಾರಿತನವಿರುವಲ್ಲಿ ಅವ್ಯವಹಾರಗಳು ನಡೆಯುತ್ತವೆ. ಸೋಮಾರಿ ಮನಸ್ಸು ದಾನವನ ಕಾರ್ಯಾಗಾರ ಎಂಬ ಗಾದೆಯನ್ನು ಸುಳ್ಳಾಗಿಸುತ್ತದೆ. ಖಾದಿ ಉದ್ಯೋಗ ಸರಳವೂ, ಕಲಿಯಲು ಸುಲಭವೂ ಆಗಿರುವುದರಿಂದ ಸಮುದಾಯದಲ್ಲಿರುವ ಎಲ್ಲ ಬಗೆಯ ಬೌದ್ಧಿಕ ಸಾಮರ್ಥ್ಯದ ಜನರು ಭಾಗವಹಿಸಬಹುದಾಗಿದೆ. ಅಂಗವಿಕಲರು ಭಾಗಿಯಾಗಬಹುದಾಗಿದೆ.(ಗಾಂಧೀ 1925) ಪ್ರತಿಯೊಬ್ಬರು ಸ್ವಾವಲಂಬಿತವಾಗಿರುವುದರಿಂದ ಸ್ವಾತಂತ್ರ್ಯಕ್ಕೆ ಹೆಚ್ಚು ಅವಕಾಶವಿರುತ್ತದೆ. ಕುಟುಂಬದಲ್ಲಿ ಇರುವ ಜನರ ವಯೋಮಾನ ಬೇರೆ ಬೇರೆ ಆಗಿದ್ದರೂ ಇಡೀ ಕುಟುಂಬ ಉತ್ಪಾದನೆಯಲ್ಲಿ ತೊಡಗಬಹುದು. ಅದು ಮನೆ ಮತ್ತು ಕಛೇರಿ; ಕುಟುಂಬ ಮತ್ತು ಕೆಲಸ; ಹಾಗೂ ಪ್ರೇಮ ಮತ್ತು ಸಾಧನೆ ಮುಂತಾದವುಗಳೆಲ್ಲವನ್ನೂ ಅದು ಸಮನ್ವಯಗೊಳಿಸುತ್ತದೆ. ಲಿಂಗ ಸಮಾನತೆಯನ್ನು ಉಂಟು ಮಾಡುವುದರ ಜೊತೆಗೆ ಕುಟುಂಬದಲ್ಲಿ ಐಕ್ಯತೆ ಮತ್ತು ಸಾಮಾಜಿಕ ಸಂಬಂಧಗಳನ್ನು, ಸಹೋದರತ್ವದ ಭಾವನೆಯನ್ನೂ ಉಂಟುಮಾಡುತ್ತದೆ. ಈ ರೀತಿಯಾಗಿ ಖಾದಿ ಗ್ರೀನ್ ಎಕಾನಮಿಯ ಐದನೆಯ ಹಾಗೂ ಕೊನೆಯ ಮಾನದಂಡವನ್ನೂ ಪೂರೈಸುತ್ತದೆ.

(ಮುಗಿಯಿತು)

ಸುಮನಸ್ ಕೌಲಗಿ

ಸರ್ವೋದಯ ಆಂದೋಲನದ ಮುನ್ನಡೆ

ಅಖಿಲ ಭಾರತ ಸರ್ವೋದಯ ಸಮಾಜದ ಸಂಯೋಜಕರಾಗಿ ಶ್ರೀ.ಆದಿತ್ಯ ಪಟ್ನಾಯಕ್ ನಿಯಮಿಸಲ್ಪಟ್ಟಿದ್ದಾರೆ. ಸರ್ವ ಸೇವಾ ಸಂಘದ ಕಾರ್ಯಸಮಿತಿಯು ಕಳೆದ ಜೂನ್ ೨೪ರಂದು ಸೇವಾ ಗ್ರಾಮದಲ್ಲಿ ನಡೆದ ಕಾರ್ಯಸಮಿತಿಯ ಅಧ್ಯಕ್ಷರಾದ ಶ್ರೀ.ಮಹದೇವ ವಿದ್ರೋಹಿಯವರಿಗೆ ಕೊಟ್ಟ ಅಧಿಕಾರದ ಮೇರೆಗೆ ಅವರು ಶ್ರೀ.ಆದಿತ್ಯ ಪಟ್ನಾಯಕ್‌ರವರನ್ನು ಸರ್ವೋದಯ ಸಮಾಜದ ಸಂಯೋಜಕರನ್ನಾಗಿ ನಿಯುಕ್ತಿಮಾಡಿದ್ದಾರೆ. ಈ ವರೆಗೆ ಸಂಯೋಜಕರಾಗಿ ಕೆಲಸ ಮಾಡುತ್ತಿದ್ದ ಎಸ್.ಎನ್.ಸುಬ್ಬರಾವ್ ನಿವೃತ್ತರಾಗಿದ್ದಾರೆ. ಶ್ರೀ. ಆದಿತ್ಯ ಪಟ್ನಾಯಕರಿಗೆ ೫೮ವರ್ಷ ವಯಸ್ಸು. ಅವರು ಸರ್ವ ಸೇವಾ ಸಂಘದ ಧರ್ಮದರ್ಶಿಗಳಲ್ಲಿ ಒಬ್ಬರಾಗಿದ್ದಾರೆ ಮತ್ತು ಒಡಿಸ್ಸಾದಲ್ಲಿ ಮಯೂರ್‌ಭಂಜ್ ಎಂಬಲ್ಲಿ ನಡೆಸುತ್ತಿರುವ ಅಂತ್ಯೋದಯ ಚೇತನಾ ಮಂಡಲದ ಸ್ಥಾಪಕರೂ ಆಗಿದ್ದಾರೆ. ಆದಿವಾಸಿಗಳ ಸಂಘಟನೆ ಮತ್ತು ಕಲ್ಯಾಣಕ್ಕೆ ಸಂಬಂಧಿಸಿದ ಅನೇಕ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ. ಅಲ್ಲದೆ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಸಂಸ್ಥೆಗಳೊಂದಿಗೆ ಸಕ್ರಿಯವಾಗಿ ಸಂಬಂಧವಿರಿಸಿಕೊಂಡಿದ್ದಾರೆ. ಅನೇಕ ವರ್ಷಗಳಿಂದ ಸರ್ವೋದಯ ವಿಚಾರದೊಂದಿಗಿದ್ದಾರೆ. ಆದಿತ್ಯ ಪಟ್ನಾಯಕ್ ರವರಿಗೆ ಕರ್ನಾಟಕ ಸರ್ವೋದಯ ಮಂಡಲವು ತನ್ನ ಎಲ್ಲ ಸಹಕಾರ ಕೊಡುತ್ತದೆ ಮತ್ತು ಅವರಿಗೆ ಶುಭ ಕೋರುತ್ತದೆ.

*****

ಅಖಿಲ ಭಾರತ ಸರ್ವೋದಯ ಮಂಡಲಿಯ ಕಾರ್ಯ ಸಮಿತಿಯ ಸಭೆ ೨೦೧೪ ಸೆಪ್ಟೆಂಬರ್ ೬ ಮತ್ತು ೭ನೇ ದಿನಾಂಕಗಳಲ್ಲ ಅನಾಸಕ್ತ್ಯಾಶ್ರಮ, ಕೌಸಾನಿ, ಜಿಲ್ಲಾ ಅಲ್ಮೋರ(ಉತ್ತರಾ ಖಂಡ) ನಲ್ಲಿ ಅಧ್ಯಕ್ಷ ಮಹದೇವ್ ವಿದ್ರೋಹಿಯವರ ಅಧ್ಯಕ್ಷತೆಯಲ್ಲಿ ನಡೆಯಲಿದೆ.

*****

೨೦೧೪ ಮೇ ತಿಂಗಳಲ್ಲಿ ಛತ್ತೀಸ್‌ಗಢ ಸರ್ವೋದಯ ಮಿತ್ರ ಮಂಡಲಿಯ ಎರಡನೇಯ ರಾಜ್ಯ ಸಮ್ಮೇಳನ ನಡೆಯಿತು. ಈ ಕಾರ್ಯಕ್ರಮದಲ್ಲಿ ರಾಜ್ಯದ ಎಲ್ಲ ಲೋಕಸೇವಕರು, ಸರ್ವೋದಯ ಮಿತ್ರರು, ಅನೇಕ ಸರ್ವೋದಯ ಪ್ರೇಮಿಗಳು ಭಾಗವಹಿಸಿದ್ದರು.

*****

ಕೆಳಕಂಡ ಜಿಲ್ಲೆಗಳಿಗೆ ಈ ಮಹನೀಯರನ್ನು ತಾತ್ಕಾಲಿಕ ಅಧ್ಯಕ್ಷರನ್ನಾಗಿ ರಾಜ್ಯ ಸರ್ವೋದಯ ಮಂಡಲದ ಅಧ್ಯಕ್ಷರು ನಾಮಕರಣ ಮಾಡಿರುತ್ತಾರೆ. ಧಾರವಾಡ – ಡಾ/ಎಮ್.ಹೆಚ್.ಪಾಟೀಲ್, ರಾಮನಗರ – ಶ್ರೀ.ಎಮ್.ವಿ. ಶೀನಿವಾಸನ್, ಚಿಕ್ಕಬಳ್ಳಾಪುರ – ಶೀ.ಅಶ್ವತ್ಥನಾರಾಯಣ ಗೌಡ, ಮೈಸೂರು –ಪ್ರೊ/ಶಿವರಾಜಪ್ಪ, ಮಂಡ್ಯ – ಶ್ರೀ.ಎಂ.ಬಿ.ಬೋರೇಗೌಡ, ತುಮಕೂರು –ಶ್ರೀ.ಎಂ.ಬಸವಯ್ಯ, ಹಾಸನ – ಶ್ರೀ.ಹೆಚ್.ಎಮ್.ಶಿವಣ್ಣ, ದಕ್ಷಿಣ ಕನ್ನಡ –ಶ್ರೀ.ನಾಮದೇವ ಶೆಣೈ, ಉಡುಪಿ – ಶ್ರೀ.ಯಶವಂತ್, ಬಳ್ಳಾರಿ –ಶೀ.ರಾಘವೇಂದರಾವ್, ಚಾಮರಾಜನಗರ – ಶೀ.ಜಿ.ಎಸ್.ಜಯದೇವ, ಬೆಂಗಳೂರು ನಗರ – ಶಿಶಿರ, ಬೆಂಗಳೂರು(ಗಾಮಾಂತರ) – ಪಶಾಂತ ವಿಜಯಪುರ, ಚಿತದುರ್ಗ – ಶೀ.ಭೀಮಾರೆಡ್ಡಿ, ರಾಯಚೂರು – ಶೀ.ಡಿ.ಆರ್.ಕೆ.ಮೂರ್ತಿ, ಉತ್ತರ ಕನ್ನಡ –ಶೀ.ಸಂಜು ಶೆಟ್ಟಾಳ್ಕರ್.

ಜನಪದ ಸೇವಾ ಟ್ರಸ್ಟ್ ಸಮಾಚಾರ

ಮೈಸೂರಿನ ರಾಮಕೃಷ್ಣನಗರದಲ್ಲಿರುವ ಲಿಂಗಾಬುಧಿಕೆರೆ ಬಳಿ 'ಅರಿವು' ಎಂಬ ಕನ್ನಡ ಮಾಧ್ಯಮ ಶಾಲೆಯಿದೆ. ಡಾ/ಮನೋಹರ್ ಮತ್ತು ಸ್ನೇಹಿತರು ಜೊತೆಗೂಡಿ ಶಾಲೆ ನಡೆಸುತ್ತಿದ್ದಾರೆ. ಕೆಲವೇ ಮಕ್ಕಳಿಂದ ಪ್ರಾರಂಭವಾದ ಈ ಶಾಲೆಯಲ್ಲಿ ಈಗ ನೂರಕ್ಕೂ ಹೆಚ್ಚು ಮಕ್ಕಳಿದ್ದಾರೆ. ಶಾಲೆ ತನ್ನದೇ ವಿಶಿಷ್ಟ ರೀತಿಯಲ್ಲಿ ನಡೆಯುತ್ತಿದೆ. ಮಕ್ಕಳಿಗೆ ಶಿಕ್ಷಣದ ಲಾಭ ಚೆನ್ನಾಗಿಯೇ ಆಗುತ್ತಿದೆ. ಇಂಗ್ಲೀಷ್ ಮಾಧ್ಯಮದ ಕೆಲ ಮಕ್ಕಳು ಅದನ್ನು ಬಿಟ್ಟು ಕನ್ನಡ ಮಾಧ್ಯಮದ 'ಅರಿವು' ಶಾಲೆಗೆ ದಾಖಲಿಸಿಕೊಂಡಿದ್ದಾರೆ. ಆ ಶಾಲೆಯ ಮಕ್ಕಳು ಟ್ರಸ್ಟಿಗೆ ಭೇಟಿಕೊಟ್ಟರು. ಮಕ್ಕಳು, ಅಧ್ಯಾಪಕರು, ಪೋಷಕರು ಮತ್ತು ಆಡಳಿತ ಮಂಡಳಿಯ ಸದಸ್ಯರು ಸಹ ಬಂದಿದ್ದರು. ಎಲ್ಲರೂ ಟ್ರಸ್ಟಿನ ಹೊಸ ಜೀವನ ದಾರಿ ಕೇಂದ್ರದಲ್ಲಿ ಒಂದು ರಾತ್ರಿ ಕಳೆದರು. ಖಾದಿ ಉದ್ಯಮದ ಬಗ್ಗೆ ವಿಶೇಷವಾಗಿ ತಿಳಿದುಕೊಳ್ಳಲು ಪ್ರಯತ್ನಿಸಿದರು.

****

ಜನಪದ ಸೇವಾ ಟ್ರಸ್ಟಿನ ಕಾರ್ಯಕಾರಿ ಸಮಿತಿ ಸಭೆ ದಿನಾಂಕ:೨೦/೦೭/೨೦೧೪ ರಂದು ಜನಪದ ನಿಲಯದಲ್ಲಿ ನಡೆಯಿತು. ಟ್ರಸ್ಟಿನ ಅಧ್ಯಕ್ಷರಾದ ಡಾ/ಮನೋಹರ್ ಅಧ್ಯಕ್ಷತೆ ವಹಿಸಿದ್ದರು. ಧರ್ಮದರ್ಶಿಗಳಾದ ಸುರೇಂದ್ರ ಕೌಲಗಿ, ಹೆಚ್.ಎನ್.ರಮೇಶ್, ಗಿರಿಜ ಕೌಲಗಿ ಮತ್ತು ಸಿ.ಎಸ್.ಜನಾರ್ಧನ್, ಸಂತೋಷ್ ಕೌಲಗಿ ಭಾಗವಹಿಸಿದ್ದರು. ಕಳೆದ ಸಲದ ಕಾರ್ಯಕಲಾಪಗಳನ್ನು ಸಭೆ ಪರಿಶೀಲಿಸಿತು. ಜಮಾನ್‌ಲಾಲ್ ಬಜಾಜ್ ಟ್ರಸ್ಟ್ ಮುಂಬಯಿ ಇವರು ಟ್ರಸ್ಟಿನ ಹೊಸ ಜೀವನ ದಾರಿ ಕೇಂದ್ರದಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳ ಅನುಕೂಲಕ್ಕಾಗಿ ಸೂಕ್ತವಾದ ಕಟ್ಟಡ ನಿರ್ಮಾಣಕ್ಕಾಗಿ ಧನ ಸಹಾಯ ಮಾಡಲು ಮುಂದೆ ಬಂದಿದ್ದಾರೆ. ಧನ ಸಹಾಯ ಪಡೆಯಲು ನಿರ್ಮಿಸಬೇಕಾದ ಕಟ್ಟಡದ ವಿನ್ಯಾಸಗಳ ಬಗ್ಗೆ ಚರ್ಚೆ ನಡೆಯಿತು. ಅಂಗೀಕೃತವಾದ ವಿನ್ಯಾಸವನ್ನು ಬಜಾಜ್ ಟ್ರಸ್ಟಿನವರಿಗೆ ಕಳುಹಿಸಿಕೊಟ್ಟು ಧನಸಹಾಯ ಪಡೆಯಬೇಕೆಂದು ತೀರ್ಮಾನಿಸಲಾಯಿತು.

****

ದತ್ತು ಕೇಂದ್ರಕ್ಕೆ ಜುಲೈ ತಿಂಗಳಲ್ಲಿ ಒಂದು ತಿಂಗಳ ಮತ್ತು ಒಂಭತ್ತು ತಿಂಗಳ ಎರಡು ಹೆಣ್ಣು ಮಕ್ಕಳು ಆಶ್ರಯ ಪಡೆದವು. ದತ್ತು ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಯಕರ್ತರು ಇಲಾಖೆ ಬೆಂಗಳೂರಿನಲ್ಲಿ ಏರ್ಪಡಿಸಿದ್ದ ಸಭೆಗೆ ಹೋಗಿ ಹೆಚ್ಚಿನ ವಿಚಾರ ತಿಳಿದುಕೊಂಡು ಬಂದರು.

****

ಕೈಮಗ್ಗ ಉದ್ಯಮದ ಉಳಿವಿಗಾಗಿ ಮಹಾರಾಷ್ಟ್ರದಲ್ಲಿ ಕೆಲಸ ಮಾಡುತ್ತಿರುವ ಸ್ಯಾಲಿಹೋಲ್ಕರ್ ಮತ್ತು ಬೆಂಗಳೂರಿನ ಪದ್ಮಿನಿ ಎಂಬುವರು ಟ್ರಸ್ಟಿಗೆ ಭೇಟಿ ಕೊಟ್ಟು ಖಾದಿ ಚಟುವಟಿಕೆಗಳನ್ನು ನೋಡಿದರು ಮತ್ತು ಸೂಕ್ತ ಸಲಹೆಗಳನ್ನು ಕೊಟ್ಟು ಪ್ರೋತ್ಸಾಹಿಸಿದರು.

ಜನಪದ ನಿಲಯದ ಅಂತರಂಗದಲ್ಲಿ – ೧೨೪

ಜನಪದ ಸೇವಾ ಟ್ರಸ್ಟ್ ಸ್ಥಾಪನೆಯಾದ ಮೇಲೆ ಜನ್ಮತಾಳಿ ಟ್ರಸ್ಟಿನ ಬೆಳವಣಿಗೆಯೊಂದಿಗೆ ಬೆಳೆದು ದೊಡ್ಡವರಾಗಿ ಟ್ರಸ್ಟಿನ ರಚನಾತ್ಮಕ ಕಾರ್ಯಗಳಲ್ಲಿ ಭಾಗಿಯಾಗಿದ್ದ ಸಂತೋಷ್ ಮತ್ತು ಸುಘೋಷ್ ಇಬ್ಬರೂ ಟ್ರಸ್ಟಿನ ಕೈ ಕಾಲು ಕಣ್ಣುಗಳಿದ್ದಂತೆ. ಸಾರ್ವಜನಿಕ ಚಟುವಟಿಕೆಗಳ ವಾತಾವರಣದಲ್ಲಿಯೇ ಬೆಳೆದ ಇವರು ಸಹಜವಾಗಿಯೇ ಸಮಾಜ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವ ಮನೋಭಾವವನ್ನು ಮೈಗೂಡಿಸಿಕೊಂಡರು. ತತ್ಪರಿಣಾಮವಾಗಿ ಅವರು ತಮ್ಮ ಯೋಗ್ಯತಾನುಸಾರವಾದ ಕೆಲಸ ಹುಡುಕಿಕೊಂಡು ನಗರಗಳಿಗೆ ಹೋಗುವ ಇಚ್ಛೆಯನ್ನು ಮಾಡಲಿಲ್ಲ. ಗ್ರಾಮ ಜೀವನದಲ್ಲಿ ಬೆಳೆದ ಮತ್ತು ಶಿಕ್ಷಣ ಪಡೆದ ಅವರಿಗೆ ನಗರ ವಾತಾವರಣ ಒಗ್ಗದೆ ಬಂದಿತು ಮತ್ತು ಹಣ ಸಂಪಾದನೆಯ ಇಚ್ಛೆಯೂ ತೀವ್ರವಾಗಿರಲಿಲ್ಲ. ಕಾಲಕ್ರಮೇಣ ಟ್ರಸ್ಟಿನ ಚಟುವಟಿಕೆಗಳು ಬೆಳೆದು ಬಂದವು. ಆ ಚಟುವಟಿಕೆಗಳ ನಿರ್ವಹಣೆಗಾಗಿ ಹೊಸ ಯುವಕರ ಅಗತ್ಯವೂ ಟ್ರಸ್ಟಿನ ಧರ್ಮದರ್ಶಿ ಮಂಡಲಿಗೆ ಅನಿಸಹತ್ತಿತು. ಆದರೆ ಟ್ರಸ್ಟಿನ ಧ್ಯೇಯೋದ್ದೇಶಗಳನ್ನು ಅರಿತ ಮತ್ತು ಗ್ರಾಮಾಂತಗ ಪ್ರದೇಶದಲ್ಲಿ ಇರಲು ಸಿದ್ಧವಿರುವ ಮತ್ತು ಹೆಚ್ಚಿನ ವೇತನ ಹಾಗೂ ಸೌಲಭ್ಯ ಬಯಸದ ಯುವಕರು ದೊರೆಯುವುದು ಕಷ್ಟ ಎನಿಸಿತು. ಟ್ರಸ್ಟಿನಲ್ಲಿಯೇ ಹುಟ್ಟಿ, ಟ್ರಸ್ಟಿನ ವಿಚಾರ ಮತ್ತು ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿದ್ದ ಸಂತೋಷ್ ಮತ್ತು ಸಘೋಷರನ್ನು ಟ್ರಸ್ಟಿನ ಕೆಲಸಕ್ಕೆ ಉಪಯೋಗಿಸಿಕೊಳ್ಳಲು ಧರ್ಮದರ್ಶಿ ಮಂಡಲಿ ತೀರ್ಮಾನಿಸಿತು. ಅದರಂತೆ ಅವರಿಬ್ಬರು ಟ್ರಸ್ಟಿನ ಕೆಲಸದಲ್ಲಿ ಯಥಾಶಕ್ತಿ ತೊಡಗಿಸಿಕೊಳ್ಳಲಾರಂಭಿಸಿದರು. ಆಗ ಅವರಿಬ್ಬರಿಗೂ ಯೌವನಾವಸ್ಥೆ. ಸ್ವಲ್ಪ ಸಮಯದ ನಂತರ ವಿವಾಹವಾದರು. ವಿವಾಹದ ನಂತರವೂ ಟ್ರಸ್ಟಿನ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ಅವರ ಸಂಸಾರ ಬೆಳೆದಂತೆಲ್ಲಾ ಅವರಿಗೆ ತಮ್ಮ ಜೀವನ ನಿರ್ವಹಣೆಯ ಚಿಂತೆ ಕಾಡಲಾರಂಭಿಸಿತು. ಜನಪದ ಸೇವಾ ಟ್ರಸ್ಟ್ ಒಂದು ಸಾರ್ವಜನಿಕ ಸೇವಾ ಸಂಸ್ಥೆ. ಮಹಾತ್ಮ ಗಾಂಧಿಯವರ ತತ್ವಕ್ಕನುಸಾರವಾಗಿ ಕೆಲಸ ಮಾಡುವ ಸಂಸ್ಥೆಯಾದ್ದರಿಂದ ಆ ಸಂಸ್ಥೆಯಲ್ಲಿ ಇರುವುದೆಲ್ಲವೂ ಸಾರ್ವಜನಿಕ. ಎಲ್ಲಿಯವರೆಗೆ ಟ್ರಸ್ಟಿನ ಕೆಲಸ ಕಾರ್ಯಗಳನ್ನು ನಿಸ್ಪೃಹತೆಯಿಂದ ಮಾಡಲಾಗುತ್ತಿರುತ್ತದೋ ಅಲ್ಲಿಯವರೆಗೆ ಟ್ರಸ್ಟಿನಲ್ಲಿರುವ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳಬಹುದು. ಆದರೆ ಇಡೀ ಸಂಸಾರದ ನಿರ್ವಹಣೆಯ ಭಾರವನ್ನು ಟ್ರಸ್ಟ್‌ನ ಮೇಲೆ ಹಾಕಲು ಬರುವಂತಿಲ್ಲ. ಮಕ್ಕಳ ಶಿಕ್ಷಣ ಇತ್ಯಾದಿ ಜವಾಬ್ದಾರಿಗಳನ್ನು ಟ್ರಸ್ಟ್‌ನ ಮೇಲೆ ಹಾಕುವುದು ಸರಿಯಲ್ಲ. ಆದ್ದರಿಂದ ಅವರಿಬ್ಬರು ಟ್ರಸ್ಟಿನ ಕೆಲಸವನ್ನು

ಮಾಡುತ್ತಾ ತಮ್ಮ ಕುಟುಂಬದ ನಿರ್ವಹಣೆಗೆ ಪ್ರತ್ಯೇಕವಾದ ಸ್ವಂತ ವ್ಯವಸ್ಥೆಮಾಡಿಕೊಳ್ಳಬೇಕೆಂಬ ವಿಚಾರ ಅವರ ಮನದಲ್ಲಿ ಮೂಡಿತು. ಅದೇ ವೇಳೆಗೆ ಟ್ರಸ್ಟಿನ ಹಿಂದಿನ ಆಡಳಿತ ಮಂಡಲಿಯಲ್ಲಿ ಕೆಲ ಭಿನ್ನಾಭಿಪ್ರಾಯಗಳು ಉಂಟಾದವು. ಈ ಕಾರಣದಿಂದಾಗಿ ಟ್ರಸ್ಟಿನ ಕಾರ್ಯದರ್ಶಿಯವರು ಜನಪದ ನಿಲಯವನ್ನು ಬಿಡುವಂಥ ಸ್ಥಿತಿ ಉಂಟಾಯಿತು. ಜನಪದ ನಿಲಯ ಜನಪದ ಸೇವಾ ಟ್ರಸ್ಟಿನ ಸ್ವತ್ತು. ಕಾರ್ಯನಿರ್ವಹಿಸುವ ಕಾರ್ಯಕರ್ತರು ಮಾತ್ರ ಅಲ್ಲಿರಬಹುದೇ ಹೊರತು ಕೆಲಸದಲ್ಲಿ ಇರದ ಕಾರ್ಯಕರ್ತರಿಗೆ ಅಲ್ಲಿರಲು ಅವಕಾಶವಿರುವುದಿಲ್ಲ. ಇದನ್ನು ತಿಳಿದುಕೊಂಡಿದ್ದ ಅವರಿಬ್ಬರು ಇಂಥ ಪರಿಸ್ಥಿತಿ ಮುಂದೆ ತಮಗೆ ಬರಬಾರದೆಂಬ ಕಾರಣಕ್ಕಾಗಿ ಟ್ರಸ್ಟಿನ ನೇರವಾದ ಆಶ್ರಯದಿಂದ ದೂರವಾಗಿರಲು ಪ್ರಯತ್ನಮಾಡಲಾರಂಭಿಸಿದರು. ಅದೇ ಹೊತ್ತಿಗೆ ಸಂತೋಷನ ಮಾವನವರು ತೀರಿಕೊಂಡರು. ಅವರ ಒಬ್ಬನೇ ಮಗ ಕೂಡ ಸ್ವಲ್ಪ ಕಾಲದ ನಂತರ ತೀರಿಕೊಂಡರು. ಜೋಡಿದಾರರಾಗಿದ್ದ ಮಾವನವರ ಜಮೀನು ವ್ಯವಸಾಯವಿಲ್ಲದೇ ಉಳಿಯಬೇಕಾಗಿ ಬಂತು. ಆಗ ಸಂತೋಷರವರಿಗೆ ಆ ಜಮೀನನ್ನು ನೋಡಿಕೊಳ್ಳುವ ಜವಬ್ದಾರಿ ಬಂತು. ಮೇಲುಕೋಟೆಯಿಂದ ಕೇವಲ ಐದು ಕಿಲೋಮೀಟರ್ ದೂರದಲ್ಲಿರುವ ರಾಂಪುರ ಎಂಬ ಗ್ರಾಮದಲ್ಲಿ ಒಂದು ಸಣ್ಣ ಮನೆ ಕಟ್ಟಿಕೊಂಡು ತಮ್ಮ ಸಂಸಾರದ ನಿರ್ವಹಣೆಗೆ ಪ್ರತ್ಯೇಕ ವ್ಯವಸ್ಥೆ ಮಾಡಿಕೊಂಡರು. ಜೊತೆಗೆ ಟ್ರಸ್ಟಿನ ಕೆಲಸ ಕಾರ್ಯಗಳನ್ನು ನಿರ್ವಹಿಸಿಕೊಂಡು ಬಂದರು. ಮುಂದೆ ಟ್ರಸ್ಟಿನ ಕಾರ್ಯದರ್ಶಿಯಾಗಿ ಪೂರ್ಣ ಪ್ರಮಾಣದ ಸಮಯವನ್ನು ಕೊಡುತ್ತಲಿದ್ದಾರೆ.

ಇನ್ನು ಸುಘೋಷ್ ತಮ್ಮ ಸಂಸಾರದ ನಿರ್ವಹಣೆಗಾಗಿ ಶಿವಮೊಗ್ಗ ಜಿಲ್ಲೆಯ ಸಾಗರ ಬಳಿ ಇರುವ ನೇದರವಳ್ಳಿಗೆ ಹೋಗಿ ತಮ್ಮ ಸಂಸಾರದೊಂದಿಗೆ ನೆಲೆಸಿದ್ದಾರೆ. ಸಾರ್ವಜನಿಕ ಜೀವನದಲ್ಲಿ ಕಷ್ಟಗಳು ಅನಿವಾರ್ಯ. ಅಲ್ಲಿ ಸ್ವಾರ್ಥಕ್ಕೆ ಎಡೆಯಿಲ್ಲ. ಬದಲಾದ ಪರಿಸ್ಥಿತಿಯಲ್ಲಿ ಸಂತೋಷ ಮತ್ತು ಸುಘೋಷ ಕೈಗೊಂಡ ತೀರ್ಮಾನ ಸರಿಯಿದೆ ಎಂದು ಅನಿಸುತ್ತದೆ. ಅವರು ಈಗ ಸ್ವತಂತ್ರರಾಗಿದ್ದರೂ ಕೂಡ ಟ್ರಸ್ಟಿನ ಅವಿಭಾಜ್ಯ ಅಂಗವಾಗಿದ್ದಾರೆ. ಟ್ರಸ್ಟಿನ ಕೆಲಸ ಕಾರ್ಯಗಳಲ್ಲಿ ಮುಂದೆಯೂ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಾರೆ ಎಂಬ ವಿಶ್ವಾಸವಿದೆ. ಸಂತೋಷನ ಮಕ್ಕಳಾದ ಸುಮನಸ್, ಸುಹಾಸಿನಿ, ಸುಪ್ರಜ್ ದೊಡ್ಡವರಾಗಿದ್ದಾರೆ ವಿದ್ಯಾಭ್ಯಾಸಕ್ಕಾಗಿ ಪರಸ್ಥಳಕ್ಕೆ ಹೋಗಿದ್ದಾರೆ. ಅವರ ಬಾಲ್ಯ ಕಳೆದು ಯುವಕರಾಗಿದ್ದಾರೆ. ಅವರು ನಮ್ಮಿಂದ ದೂರವಿದ್ದರೂ ವಿರಹ ನೋಯಿಸುವುದಿಲ್ಲ. ಆದರೆ ಸುಘೋಷನ ಮಕ್ಕಳಾದ ಗೌರಿ ಮತ್ತು ಸಮೀಪ ಇನ್ನು ಬಾಲ್ಯಾವಸ್ಥೆಯಲ್ಲಿದ್ದಾರೆ. ಅವರ ಆಟ ಪಾಠಗಳನ್ನು ನೋಡಿ ಸಂತೋಷಿಸುತ್ತಿದ್ದ ಅವಕಾಶ ತಪ್ಪಿತಲ್ಲ ಎಂಬ ವ್ಯಥೆ ನಮ್ಮಿಬ್ಬರ ಮನಸ್ಸಿನಲ್ಲಿದೆ.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾ ಸ್ಮರಿಸುತ್ತದೆ.

ಶ್ರೀ.ಎಸ್.ಸುನೀಲ್ – ಮೇಲುಕೋಟೆ

ಪ್ರೊ.ಹೆಚ್.ವಿ.ಮಂಜುನಾಥ್ – ಬೆಂಗಳೂರು

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ

ಶ್ರೀ.ಹೆಚ್.ಎನ್.ಎಸ್.ರಾವ್ – ಮಣಿಪಾಲ್

ಶ್ರೀ.ಹೆಚ್.ಎಸ್.ಚಂದ್ರಶೇಖರಯ್ಯ – ಶಿವಳ್ಳಿ

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ತಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ-ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ ಅಂಚೆ

KA / SK / MND / 470 / 2012-2014
Regd. no. KAR / KAN / 2000 / 3820

MELKOTE

ಶ್ರೀಮತಿ/ ಶ್ರೀ....... 278 ಕಿರಣ್ ದೇವಿರಯ್ಯ
ಮಹಡಿ # ಜಿಎಫ್ 1 #4ಬಿ,
ಶ್ರೀ ರಾಮಮಂದಿರ ರಸ್ತೆ,
ನ್ಯೂ ತಿಪ್ಪಸಂದ್ರ,
ಬೆಂಗಳೂರು - 560075

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust
Melkote, Dist- Mandya - 571431. Phone : 08236 316344/ 299854
e-mail : janapada@yahoo.com - Web : janapada.net
Printed at Sanketh Mudrna, Melkote